# ಕುವೆಂಪು ವಿಶ್ವವಿದ್ಯಾಲಯ

# ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ಸಭಾ ದಿನಾಂಕ : 16-06-2023

ಪ್ರಾಧಿಕಾರಗಳ ವಿಭಾಗ

ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451
ಶಿವಮೊಗ್ಗ ಜಿಲ್ಲೆ.

E VISHWA-HEBBAL-SYD-16-06-23

ಫ್ಯಾಕ್ಸ್: 08282-256262
ಇ-ಮೇಲ್:drsyndicateku@gmail.com

☎ 08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್:www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ- 577 451

ಸಂಖ್ಯೆ: ಕುವಿ:ಯುಎಟಿ-I:ಸಿಂ-: ೨11 :2023-24 ದಿನಾಂಕ:14-07-2023

ಮಾನ್ಯರೆ,

ವಿಷಯ: ದಿನಾಂಕ:16-06-2023 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು- ಅಧ್ಯಾಯ-III ರ ಪ್ರಕರಣ- 16 ರನ್ವಯ ದಿನಾಂಕ:16-06-2023 ರಂದು ವಿಶ್ವವಿದ್ಯಾಲಯದ ಆಡಳಿತ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-IIIರ ಪ್ರಕರಣ - 16 ರ ಪ್ರಕಾರ ಸದರಿ ನಡಾವಳಿಗಳು ತಲುಪಿದ **07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

**ವಿ.ಸೂ.: ಸದರಿ ನಡಾವಳಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಯಥಾವತ್ತಾಗಿ ಪ್ರಕಟಿಸಲಾಗಿದೆ.**

ತಮ್ಮ ವಿಶ್ವಾಸಿ,

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
9) **ನಿರ್ದೇಶಕರು / ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.**
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಶಾಖಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ. ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಚಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ,
19) ಕಛೇರಿ ಪ್ರತಿ / ರಕ್ಷಣಾ ಕಡತ.

PROCEEDINGS COVE LETTER-29-03-20222

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:16-06-2023ರಂದು ಶುಕ್ರವಾರ ಪೂರ್ವಾಹ್ನ 11.00 ಗಂಟೆಗೆ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣ" ಇಲ್ಲಿ ನಡೆದ ಸಿಂಡಿಕೇಟ್ ಸಾಮಾನ್ಯ ಸಭೆ"ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಗೀತಾ ಸಿ. ಕುಲಸಚಿವರು (ಪ್ರಭಾರ) | ಸದಸ್ಯ ಕಾರ್ಯದರ್ಶಿಗಳು |
| 3. | ಪ್ರೊ. ನವೀನ್‌ಕುಮಾರ್ ಎಸ್.ಕೆ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. | ಶ್ರೀ ಓಂ ಪ್ರಕಾಶ್ ರಾಜೋಳಿ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. | ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 6. | ಶ್ರೀ ಎನ್. ಆರ್. ಮಂಜುನಾಥ | ಸದಸ್ಯರು |
| 7. | ಪ್ರೊ. ಗೀತಾ ಸಿ. ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 8. | ಪ್ರೊ. ಚಂದ್ರಶೇಖರ್ ಕೆ., | ಸದಸ್ಯರು |
| 9. | ಡಾ. ಎ.ಟಿ. ಪದ್ಮೇಗೌಡ., ಪ್ರಾಂಶುಪಾಲರು, | ಸದಸ್ಯರು |
| 10. | ಡಾ. ಎಂ. ಸ್ವಾಮಿ., ಪ್ರಾಂಶುಪಾಲರು, | ಸದಸ್ಯರು |
| 11. | ಡಾ. ಸಂಧ್ಯಾ ಕಾವೇರಿ ಕೆ., ಪ್ರಾಂಶುಪಾಲರು | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ಶ್ರೀ ವಿನಯ್‌ಕುಮಾರ್ ಶೆಟ್ಟಿ., ಪ್ರಾಂಶುಪಾಲರು, | ಸದಸ್ಯರು |
| 2. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 3. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 4. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 5. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರು ಇರುವುದಿಲ್ಲ.

ಪ್ರಸ್ತಾವನೆ: ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಮಾನ್ಯ ಕುಲಪತಿಯವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ದಿನಾಂಕ:09-06-2023 ರಂದು ಬೆಂಗಳೂರಿನಲ್ಲಿ ನಡೆದ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳ ಸಭೆಯಲ್ಲಿ ಕರ್ನಾಟಕ ಸರ್ಕಾರದ ನೂತನ ಉನ್ನತ ಶಿಕ್ಷಣ ಸಚಿವರಾದ ಮಾನ್ಯ ಡಾ. ಎಂ.ಸಿ. ಸುಧಾಕರ್‌ರವರು ಕುಲಪತಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಸರ್ಕಾರವು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದು, ರಾಜ್ಯದಲ್ಲಿರುವ 89 ವಿಶ್ವವಿದ್ಯಾಲಯಗಳು ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಹಾಗೂ ಸಂಶೋಧನೆ ಕೈಗೊಳ್ಳಲು ಸರ್ಕಾರ ಬೆಂಬಲಿಸುತ್ತದೆ. ಸರ್ಕಾರಕ್ಕೆ ವಿಶ್ವವಿದ್ಯಾಲಯಗಳು ಸಹಕಾರ ನೀಡಬೇಕು ಎಂದರು. ಉನ್ನತ ಶಿಕ್ಷಣ ಕ್ಷೇತ್ರದ ಸಮಸ್ಯೆಗಳು ಮತ್ತು ಸವಾಲುಗಳ ಕುರಿತಾಗಿ ಹಾಗೂ ಎನ್.ಇ.ಪಿ. ಮತ್ತು ಯು.ಯು.ಸಿ.ಎಂ.ಎಸ್. ಕುರಿತಾಗಿ ವಿಸ್ತೃತವಾಗಿ ಚರ್ಚಿಸಲಾಯಿತು. ಎನ್.ಇ.ಪಿ. ಮತ್ತು ಯು.ಯು.ಸಿ.ಎಂ.ಎಸ್‌ನ್ನು ಕುವೆಂಪು ವಿಶ್ವವಿದ್ಯಾಲಯವು ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವುದಾಗಿ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನಕ್ಕೆ ತಂದರು. ಇದಕ್ಕೆ ಮಾನ್ಯ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು ಎಂದರು.

ನಂತರ ಕಾರ್ಯಸೂಚಿಯನ್ವಯ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

## ಪ್ರಾಧಿಕಾರ ವಿಭಾಗ

**2023-ಸಿಂ-4.01:** ದಿನಾಂಕ:19-05-2023 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.

**ಚರ್ಚೆ:** ಕುಲಸಚಿವರು ದಿನಾಂಕ:19-05-2023ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಅನುಮೋದನೆ ಹಾಗೂ ಸ್ಥಿರೀಕರಣಕ್ಕಾಗಿ ಸಭೆಗೆ ಮಂಡಿಸಿದರು. ಶ್ರೀ ಎ.ಟಿ.ಪದ್ಮೇಗೌಡರವರು ವಿಷಯ ಸಂಖ್ಯೆ:2023-ಸಿಂ-3.22(ಡಿ) ಹಾಗೂ 2023-ಸಿಂ-3.12(ಡಿ) ಕುರಿತು ಮಾತನಾಡುತ್ತಾ, ಈಗಾಗಲೇ ಮುಂಬಡ್ತಿ ನೀಡಿರುವ ನೌಕರರಿಗೆ ಈವರೆಗೂ ವೇತನ ನಿಗದೀಕರಣ ಮಾಡಿಲ್ಲ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ ಹುದ್ದೆಗಳ ಉನ್ನತೀಕರಣದ ವಿನಿಯಮವು ಸರ್ಕಾರದಿಂದ ಅನುಮೋದನೆಯಾಗಿ ಬರುವವರೆಗೆ ಯಾವುದೇ ಮುಂಬಡ್ತಿ ನೀಡಬಾರದಿತ್ತು. ಆದರೆ, ಇತ್ತೀಚೆಗೆ ಮತ್ತೆ ಮುಂಬಡ್ತಿ ನೀಡಲಾಗಿರುವುದು ಸರಿಯಾದ ಕ್ರಮವಲ್ಲ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಕುಲಸಚಿವ (ಮೌಲ್ಯಮಾಪನ)ರವರಾದ ಪ್ರೊ. ನವೀನ್‌ಕುಮಾರ್, ಎಸ್.ಕೆ., ಇವರು ಈ ಹಿಂದೆ ಕುಲಸಚಿವ ಆಡಳಿತ ಹುದ್ದೆಯ ಪ್ರಭಾರದಲ್ಲಿದ್ದಾಗ ಉನ್ನತೀಕರಣ ಹುದ್ದೆಗಳಲ್ಲಿ ಮುಂಬಡ್ತಿ ಪಡೆದಿದ್ದ ನೌಕರರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಆದರೆ, ಈಗ ಆಕ್ಷೇಪಿಸುತ್ತಿರುವುದು ಸರಿಯಲ್ಲ ಎಂದರು. ಪ್ರಾಂಶುಪಾಲರಾದ ಡಾ.ಎಂ.ಸ್ವಾಮಿರವರು ಮಾತನಾಡಿ, ಉದ್ಯೋಗಿಗಳಿಗೆ ಮುಂಬಡ್ತಿ ನೀಡಿದ ಕೂಡಲೇ ವೇತನ ನಿಗದೀಕರಣ ಮಾಡುವುದು ಒಂದು ಕ್ರಮವಾಗಿರುತ್ತದೆ. ಆದರೆ, ವಿಳಂಬ ಮಾಡುವುದು ಸರಿಯಲ್ಲ ಎಂದರು. ಕುಲಸಚಿವರು ಮಾತನಾಡಿ, ವೇತನ ನಿಗದೀಕರಣದ ಕರಡು ಸಿದ್ಧವಾಗಿದ್ದು, ಮಾನ್ಯ ಕುಲಪತಿಯವರು ಅನುಮೋದಿಸಿದ ಕೂಡಲೇ ಆದೇಶ ನೀಡಲಾಗುವುದು ಎಂದರು.

ಸುದೀರ್ಘ ಚರ್ಚೆಯ ನಂತರ ಉನ್ನತೀಕರಣ ಹುದ್ದೆಗಳನ್ನು ಹೊರತುಪಡಿಸಿ ಮಂಜೂರಾಗಿರುವ ಉಳಿದ ಹುದ್ದೆಗಳಿಗೆ ಬಡ್ತಿ ನೀಡಿರುವ ನೌಕರರಿಗೆ ತಕ್ಷಣವೇ ವೇತನ ನಿಗದೀಕರಣ ಮಾಡುವಂತೆ ಹಾಗೂ ಉನ್ನತೀಕರಣದ ಹುದ್ದೆಗಳಲ್ಲಿರುವ ನೌಕರರಿಗೆ ಈಗಾಗಲೇ ಮುಂಬಡ್ತಿ ನೀಡಿರುವ ಹಿನ್ನೆಲೆಯಲ್ಲಿ ಅವರುಗಳಿಗೆ ವೇತನ ನಿಗದೀಕರಣಗೊಳಿಸುವ ಸಲುವಾಗಿ ಈ ಕೆಳಕಂಡಂತೆ ಸಮಿತಿ ರಚಿಸಲು ಹಾಗೂ ಸಮಿತಿಯು ಮಂಜೂರಾದ ಹಾಗೂ ಉನ್ನತೀಕರಣದಿಂದ ಲಭ್ಯವಾಗಿರುವ ಹುದ್ದೆಗಳು, ಈಗಾಗಲೇ ಆಗಿರುವ ಡಿ.ಪಿ.ಸಿ. ಸಮಿತಿಯ ನಿರ್ಣಯಗಳು ಹಾಗೂ ಉನ್ನತೀಕರಣ ಹುದ್ದೆಯಲ್ಲಿರುವ ನೌಕರರಿಗೆ ವೇತನ ನಿಗದೀಕರಣದ ಬಗ್ಗೆ ಪರಿಶೀಲಿಸಿ ವರದಿ ನೀಡಬೇಕೆಂದು ತೀರ್ಮಾನಿಸಲಾಯಿತು.

1) ಕುಲಸಚಿವರು : ಅಧ್ಯಕ್ಷರು
2) ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರು, ಶಿವಮೊಗ್ಗ : ಸದಸ್ಯರು
3) ಪ್ರೊ. ಚಂದ್ರಶೇಖರ್, ಪ್ರಾಧ್ಯಾಪಕರು ಹಾಗೂ ಸಿಂಡಿಕೇಟ್ ಸದಸ್ಯರು : ಸದಸ್ಯರು
4) ಡಾ.ಎ.ಟಿ.ಪದ್ಮೇಗೌಡ, ಪ್ರಾಂಶುಪಾಲರು ಹಾಗೂ ಸಿಂಡಿಕೇಟ್ ಸದಸ್ಯರು : ಸದಸ್ಯರು
5) ಶ್ರೀ ಶೇರಿಗಾರ್, ಸೇವಾ ವಿಷಯಗಳ ತಜ್ಞರು, ಶಿವಮೊಗ್ಗ : ಸದಸ್ಯರು
6) ಉಪಕುಲಸಚಿವರು, ಮಾನವ ಸಂಪನ್ಮೂಲ ನಿರ್ವಹಣೆ ವಿಭಾಗ : ಸಂಚಾಲಕರು

**ವಿಷಯ ಸಂಖ್ಯೆ: 2023-ಸಿಂ-3.11:** ವೃತ್ತಿ ಪದೋನ್ನತಿ (CAS) ಸಂಬಂಧ BOA/Screening cum Evaluation Committee ನಡಾವಳಿಗಳಿಗೆ ಅನುಮೋದನೆ – ಇದರಲ್ಲಿ ನೇಮಕಾತಿ ಮಂಡಳಿಯ ಶಿಫಾರಸ್ಸಿನಂತೆ ಅರ್ಹತಾ ದಿನಾಂಕಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಯಿತು.

| ಅಧ್ಯಾಪಕರ ಹೆಸರು | ವಿಭಾಗ | ಪ್ರಸ್ತುತ ಹುದ್ದೆ | ವೃತ್ತಿ ಪದೋನ್ನತಿಗೆ ಪರಿಗಣಿಸಿರುವುದು | ಶಿಫಾರಸ್ಸು ಮಾಡಿದ ಅರ್ಹತಾ ದಿನಾಂಕ |
|---|---|---|---|---|
| ಡಾ. ಸತೀಶ್ ಕುಮಾರ್ | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | AGP-7000 ಸಹಾಯಕ ಪ್ರಾಧ್ಯಾಪಕ | AGP-8000 ಸಹಾಯಕ ಪ್ರಾಧ್ಯಾಪಕ | 21-07-2015 |
| | | AGP-8000 ಸಹಾಯಕ ಪ್ರಾಧ್ಯಾಪಕ | AGP-9000 ಸಹ ಪ್ರಾಧ್ಯಾಪಕ | 21-07-2018 |
| | | AGP-9000 ಸಹ ಪ್ರಾಧ್ಯಾಪಕ | AGP-10000 ಪ್ರಾಧ್ಯಾಪಕ | 21-07-2021 |

ಚರ್ಚೆಯ ನಂತರ ದಿನಾಂಕ:19-05-2023ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಮೇಲಿನ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಅನುಮೋದಿಸಿ ದೃಢೀಕರಿಸಲಾಯಿತು.

**2023-ಸಿಂ-4.02:** ದಿನಾಂಕ:30-05-2023 ರಂದು ನಡೆದ ಸಿಂಡಿಕೇಟ್‌ನ ವಿಶೇಷ (ಆನ್‌ಲೈನ್) ಸಭಾ ನಡಾವಳಿಗಳ ಧೃಢೀಕರಣ.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:30-05-2023 ರಂದು ನಡೆದ ಸಿಂಡಿಕೇಟ್‌ನ ವಿಶೇಷ (ಆನ್‌ಲೈನ್) ಸಭಾ ನಡಾವಳಿಗಳನ್ನು ಅನುಮೋದಿಸಿ ಧೃಢೀಕರಿಸಲಾಯಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2023-ಸಿಂ-4.03** ವಿಶ್ವವಿದ್ಯಾಲಯದ ಘಟಕ ಕಾಲೇಜುಗಳ ಪ್ರಾಧ್ಯಾಪಕರುಗಳಿಗೆ ಸ್ಥಾನೀಕರಣ ದಿನಾಂಕವನ್ನು ಪರಿಷ್ಕರಿಸಿ ಮರು ನಿಗದಿಪಡಿಸುವ ಬಗ್ಗೆ.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ದಿನಾಂಕ:01-01-2016 ರಿಂದ ಜಾರಿಗೆ ಬಂದಿರುವ 7ನೇ ಯು.ಜಿ.ಸಿ. ಪರಿಷ್ಕೃತ ವೇತನ ಶ್ರೇಣಿ ವಿಸ್ತರಣೆ ಕುರಿತಂತೆ ದಿನಾಂಕ:16-03-2019ರ ಸರ್ಕಾರಿ ಆದೇಶ ಹಾಗೂ ದಿನಾಂಕ:18-07-2018ರ ಯು.ಜಿ.ಸಿ. ನಿಯಮಾನುಸಾರ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಅರ್ಹ ಸಹ-ಪ್ರಾಧ್ಯಾಪಕರುಗಳಿಗೆ ನೇಮಕಾತಿ ಮಂಡಳಿಯ ಶಿಫಾರಸ್ಸಿನಂತೆ ವೃತ್ತಿ ಪದೋನ್ನತಿ ಯೋಜನೆಯಡಿ ಪ್ರಾಧ್ಯಾಪಕ ಹುದ್ದೆಗೆ ಸ್ಥಾನೀಕರಣ ಮಾಡಲಾಗಿದೆ. ಈ ಸಂಬಂಧ ವಿಶ್ವವಿದ್ಯಾಲಯವು ಪರಿನಿಯಮವನ್ನು ರಚಿಸಿದ್ದು, ಘಟಕ ಕಾಲೇಜಿನ ಸಹ ಪ್ರಾಧ್ಯಾಪಕರಿಗೆ ಪ್ರಾಧ್ಯಾಪಕರಾಗಿ ವೃತ್ತಿ ಪದೋನ್ನತಿ ನೀಡುವ ಕುರಿತು ಪರಿನಿಯಮಕ್ಕೆ ದಿನಾಂಕ:08/12-04-2021 ರಲ್ಲಿ ಮಾನ್ಯ ಕುಲಾಧಿಪತಿಗಳಿಂದ ಅನುಮೋದನೆ ಪಡೆಯಲಾಗಿರುತ್ತದೆ. ಅದರಂತೆ ಪರಿನಿಯಮ ಅನುಮೋದನೆಗೊಂಡ ದಿನಾಂಕದಿಂದ ಅನ್ವಯವಾಗುವಂತೆ ಬಿ.ಓ.ಎ. ಶಿಫಾರಸ್ಸಿನಂತೆ ಸಹ-ಪ್ರಾಧ್ಯಾಪಕರಿಗೆ ಪ್ರಾಧ್ಯಾಪಕ ಹುದ್ದೆಗೆ ವೃತ್ತಿಪದೋನ್ನತಿ ನೀಡಲಾಗಿರುತ್ತದೆ. ಆದರೆ, ಘಟಕ ಕಾಲೇಜುಗಳ ಕೆಲವು ಪ್ರಾಧ್ಯಾಪಕರುಗಳು ಮನವಿ ಸಲ್ಲಿಸಿ, ಈಗಾಗಲೇ ನಿಗದಿಪಡಿಸಿರುವ ಸ್ಥಾನೀಕರಣ ದಿನಾಂಕಗಳನ್ನು ಮೈಸೂರು ವಿಶ್ವವಿದ್ಯಾಲಯದ ಆದೇಶ, ಯು.ಜಿ.ಸಿ, ರಾಜ್ಯ ಸರ್ಕಾರ ಹಾಗೂ ವಿಶ್ವವಿದ್ಯಾಲಯದ ಪರಿನಿಯಮದಂತೆ ಹಾಗೂ ಐ.ಕ್ಯೂ.ಎ.ಸಿ ಶಿಫಾರಸ್ಸಿನಂತೆ ಅರ್ಹತಾ ದಿನಾಂಕದಿಂದ ಸ್ಥಾನೀಕರಣ ಸೌಲಭ್ಯಗಳನ್ನು ನೀಡುವಂತೆ ಕೋರಿರುತ್ತಾರೆ. ಈ ಕುರಿತಾಗಿ ಸ್ಥಾನೀಕರಣ ದಿನಾಂಕಗಳ ಪರಿಷ್ಕರಣೆಗಾಗಿ ದಿನಾಂಕ:02-06-2023 ಹಾಗೂ ದಿನಾಂಕ:03-06-2023ರಂದು ನಡೆದ ಬಿ.ಓ.ಎ., ಸಭೆಗಳಲ್ಲಿ ಮಂಡಿಸಲಾಗಿತ್ತು. ಆದರೆ, ಇದನ್ನು ನೇರವಾಗಿ ಸಿಂಡಿಕೇಟ್ ಸಭೆಗೆ ಮಂಡಿಸಿ ಅನುಮೋದನೆ ಪಡೆಯುವಂತೆ ಬಿ.ಓ.ಎ., ಸಭೆಗಳಲ್ಲಿ ಮೌಖಿಕವಾಗಿ ಸೂಚಿಸಿರುವುದರಿಂದ ಸ್ಥಾನೀಕರಣ ದಿನಾಂಕಗಳ ಪರಿಷ್ಕರಣೆಗಾಗಿ ಸಭೆಗೆ ಮಂಡಿಸಲಾಗಿದೆ ಎಂದರು. ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಓಂ ಪ್ರಕಾಶ್ ರಾಚೋಳೆರವರು ಮಾತನಾಡಿ, ಬಿ.ಓ.ಎ. ನಲ್ಲಿ ಸದಸ್ಯರು ಮೌಖಿಕವಾಗಿ ತಿಳಿಸಿದ್ದು, ಲಿಖಿತ ರೂಪದಲ್ಲಿ ಶಿಫಾರಸ್ಸು ಮಾಡಿಲ್ಲವಾದ್ದರಿಂದ ಇದಕ್ಕೆ ಮಾನ್ಯತೆ ಇರುವುದಿಲ್ಲ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಈ ಹಿಂದೆ ಐ.ಕ್ಯೂ.ಎ.ಸಿ. ಮೌಲ್ಯಮಾಪನ ಮಾಡಿರುವ ಶಿಫಾರಸ್ಸಿನ ಪ್ರಕಾರ ಸ್ಥಾನೀಕರಣದ ದಿನಾಂಕಗಳ ಪರಿಷ್ಕರಣೆಗೆ ಮಂಡಿಸಿದ್ದು ಅನುಮೋದಿಸುವಂತೆ ಕೋರಿದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ ಬಿ.ಓ.ಎ., ಶಿಫಾರಸ್ಸುಗಳನ್ನು ಮಾತ್ರ ಸಿಂಡಿಕೇಟ್ ಸಭೆಯಲ್ಲಿ ಅನುಮೋದಿಸಬಹುದು. ಆದರೆ, ವೃತ್ತಿಪದೋನ್ನತಿಯ ಯಾವುದೇ ದಿನಾಂಕಗಳನ್ನು ನೇರವಾಗಿ ಸಿಂಡಿಕೇಟ್ ಸಭೆಯಲ್ಲಿ ಪರಿಷ್ಕರಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಇದು ಯು.ಜಿ.ಸಿ., ಮತ್ತು ಸರ್ಕಾರದ ನಿಯಮಗಳಿಗೆ ವಿರುದ್ಧವಾಗಿರುತ್ತದೆ. ಎಂದ ಅವರು, ಇದೇ ಸಂದರ್ಭದಲ್ಲಿ ಕೆಲವು ಸ್ನಾತಕೋತ್ತರ ವಿಭಾಗಗಳ ಅಧ್ಯಾಪಕರ ವೃತ್ತಿಪದೋನ್ನತಿಯ ದಿನಾಂಕಗಳನ್ನು ಪರಿಷ್ಕರಿಸಲು ಬಿ.ಓ.ಎ., ಸಭೆಯ ಶಿಫಾರಸ್ಸುಗಳನ್ನು ಸಿಂಡಿಕೇಟ್‌ಗೆ ಮಂಡಿಸಿರುವುದನ್ನು ಉದಾಹರಿಸುತ್ತಾ, ಈ ಹಿಂದೆ ಕೂಡ ಇದೇ ಕ್ರಮ ಅನುಸರಿಸಲಾಗಿದ್ದು, ಘಟಕ ಕಾಲೇಜಿನವರಿಗೆ ಕೂಡ ಇದು ಅನ್ವಯವಾಗುತ್ತದೆ ಎಂದರು. ಪ್ರಾಂಶುಪಾಲರಾದ ಶ್ರೀ ಎಂ.ಸ್ವಾಮಿರವರು ಮಾತನಾಡಿ, ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಸರ್ಕಾರದ

ಆದೇಶದ ದಿನಾಂಕದಿಂದ ಮಾತ್ರ ಸ್ಥಾನೀಕರಣ ನೀಡಲಾಗುತ್ತಿದೆ ಎಂದರು. ಎಲ್ಲಾ ಸದಸ್ಯರು ಇದಕ್ಕೆ ಸಹಮತ ವ್ಯಕ್ತಪಡಿಸಿದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ಯು.ಜಿ.ಸಿ., ಮತ್ತು ಸರ್ಕಾರದ ನಿಯಮಗಳು ಹಾಗೂ ವಿಶ್ವವಿದ್ಯಾಲಯದ ಪರಿನಿಯಮ ಮುಂತಾದುವುಗಳನ್ನು ಪರಿಶೀಲಿಸಿ, ಇನ್ನೊಮ್ಮೆ ಬಿ.ಓ.ಎ., ಸಭೆಯಲ್ಲಿ ಮಂಡಿಸಿ, ಬಿ.ಓ.ಎ. ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಬೇಕೆಂದು ನಿರ್ಣಯಿಸಲಾಯಿತು.

**2023–ಸಿಂ–4.04** ಶ್ರೀ ಅಜೀಜ್ ಅಹಮದ್ ಕೆ, ನಿವೃತ್ತ ಉಪನ್ಯಾಸಕರು (ರಾಜ್ಯ ವೇತನ ಶ್ರೇಣಿ) ಇವರಿಗೆ ಪೂರ್ವಾನ್ವಯವಾಗುವಂತೆ ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡುವ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ಶ್ರೀ ಅಜೀಜ್ ಅಹಮದ್, ಕೆ., ಉಪನ್ಯಾಸಕರು, ಉರ್ದು ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ – ಇವರನ್ನು ಸರ್ಕಾರದ ವಿಶೇಷ ನಿಯಮ 1996ರನ್ವಯ ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ:ಕುವಿ:ಸಿಬ್ಬಂದಿ–3:160:6814:2003–04 ದಿನಾಂಕ:06–01–2004ರ ಕ್ರಮ ಸಂಖ್ಯೆ 7 ರಲ್ಲಿನ ಷರತ್ತುಗಳನ್ವಯ ರಾಜ್ಯ ವೇತನ ಶ್ರೇಣಿಯಲ್ಲಿ ಉಪನ್ಯಾಸಕರಾಗಿ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ. 1996ರ ವಿಶೇಷ ನಿಯಮದಲ್ಲಿ ವಿಲೀನಗೊಂಡ ಉಪನ್ಯಾಸಕರುಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 119 ಡಿಸಿಇ 2005 ದಿನಾಂಕ:16–09–2006ರನ್ವಯ ಯುಜಿಸಿ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ದಿನಾಂಕ:16–09–2009 ರೊಳಗೆ M.Phil/Ph.D/NET/SLET ಅರ್ಹತೆ ಹೊಂದಲು ಅವಕಾಶ ನೀಡಲಾಗಿತ್ತು. ಸದರಿಯವರು ದಿನಾಂಕ:06–05–2010ರಲ್ಲಿ ಮನವಿಯೊಂದಿಗೆ ಎಂ.ಫಿಲ್., ಪದವಿ ಪಡೆದಿರುವ ದಾಖಲಾತಿಗಳನ್ನು ಸಲ್ಲಿಸಿ, ಖಾಯಂ ಪೂರ್ವ ಸೇವಾವಧಿ ಘೋಷಣೆ ಮತ್ತು ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸಲು ಕೋರಿರುತ್ತಾರೆ.

ಸದರಿಯವರು ಸಲ್ಲಿಸಿದ್ದ ಎಂ.ಫಿಲ್., ಅರ್ಹತೆಯ ದಾಖಲೆಗಳನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯದಿಂದ ನೈಜತೆಯಿಂದ ಕೂಡಿರುತ್ತದೆ ಎಂದು ಪತ್ರಿಸಿದ್ದು, ವಿಶ್ವವಿದ್ಯಾಲಯ ಕೇಳಿದ್ದ ಮಾಹಿತಿಗಳಿಗೆ ಸ್ಪಷ್ಟೀಕರಣ ನೀಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಸದರಿಯವರ ಎಂ.ಫಿಲ್ ಪದವಿಯ ನೈಜತೆ ಕುರಿತು ಯಾವುದೇ ಸ್ಪಷ್ಟ ಮಾಹಿತಿ ಸ್ವೀಕೃತವಾಗದೇ ಇದ್ದುದ್ದರಿಂದ ವಿಶ್ವವಿದ್ಯಾಲಯವು ಸದರಿಯವರ ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡಿರುವುದಿಲ್ಲ ಹಾಗೂ ಸದರಿಯವರನ್ನು ರಾಜ್ಯ ವೇತನ ಶ್ರೇಣಿಯಲ್ಲಿಯೇ ಮುಂದುವರೆಸಿದ್ದು, ಖಾಯಂ ಪೂರ್ವ ಸೇವಾವಧಿ ಘೋಷಣೆಯಾಗದ ಪ್ರಯುಕ್ತ ಅವರಿಗೆ ದಿನಾಂಕ:01–01–2007 ರಿಂದ ವಾರ್ಷಿಕ ವೇತನ ಬಡ್ತಿಯನ್ನು ಕೂಡ ಮಂಜೂರು ಮಾಡಿರುವುದಿಲ್ಲ. ಅವರು ರಾಜ್ಯ ವೇತನ ಶ್ರೇಣಿಯನ್ವಯ ದಿನಾಂಕ:31–05–2022ಕ್ಕೆ 60 ವರ್ಷ ಪೂರ್ಣಗೊಂಡಿರುವುದರಿಂದ ಸದರಿಯವರನ್ನು ವಯೋ ನಿವೃತ್ತಿಗೊಳಿಸಿ ಕಾಲೇಜಿನ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ.

ಮೇಲ್ಕಂಡ ಮಾಹಿತಿಗಳನ್ನೊಳಗೊಂಡಂತೆ ಸದರಿಯವರಿಗೆ ಖಾಯಂಪೂರ್ವ ಸೇವಾವಧಿ ಘೋಷಣೆ ಮಾಡದೇ ರಾಜ್ಯ ವೇತನ ಶ್ರೇಣಿಯಲ್ಲಿ ವಯೋನಿವೃತ್ತಿಗೊಳಿಸಿರುವುದರಿಂದ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡುವ ಬಗ್ಗೆ ಕಾನೂನು ಅಭಿಪ್ರಾಯ ಪಡೆಯಲಾಗಿದ್ದು, ಅವರಿಗೆ ಅರ್ಹತಾ ದಿನಾಂಕಕ್ಕೆ ಅನ್ವಯವಾಗುವಂತೆ ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡುವಂತೆ ಹಾಗೂ ಅವರಿಗೆ ಲಭ್ಯ ನಿವೃತ್ತಿ ಸೌಲಭ್ಯಗಳನ್ನು ರಾಜ್ಯ ವೇತನ ಶ್ರೇಣಿಯಲ್ಲಿ ನೀಡುವಂತೆ ಅಭಿಪ್ರಾಯ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಶ್ರೀ ಕೆ.ಅಜೀಜ್ ಅಹಮದ್ ನಿವೃತ್ತ ಉಪನ್ಯಾಸಕರು (ರಾಜ್ಯ ವೇತನ ಶ್ರೇಣಿ) ಇವರಿಗೆ ಪೂರ್ವಾನ್ವಯವಾಗುವಂತೆ ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡುವ ಅನುಮೋದನೆಗಾಗಿ ಮಂಡಿಸಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ, ಶ್ರೀ ಕೆ.ಅಜೀಜ್ ಅಹಮದ್ ನಿವೃತ್ತ ಉಪನ್ಯಾಸಕರು (ರಾಜ್ಯ ವೇತನ ಶ್ರೇಣಿ), ಉರ್ದು ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ ಇವರಿಗೆ ಇದೊಂದು ವಿಶೇಷ ಸಂದರ್ಭವೆಂದು ಪರಿಗಣಿಸಿ, ಅರ್ಹತಾ ದಿನಾಂಕದಿಂದ ಪೂರ್ವಾನ್ವಯವಾಗುವಂತೆ ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡುವಂತೆ ತತ್ಸಂಬಂಧದ ಆರ್ಥಿಕ ಸೌಲಭ್ಯವನ್ನು ಹಾಗೂ ಅವರಿಗೆ ಲಭ್ಯ ನಿವೃತ್ತಿ

ಸೌಲಭ್ಯಗಳನ್ನು ರಾಜ್ಯ ವೇತನ ಶ್ರೇಣಿಯಲ್ಲಿ ಮಂಜೂರು ಮಾಡುವಂತೆ ಸಭೆಯು ಅನುಮೋದನೆ ನೀಡಿತು.

2023-ಸಿಂ-4.05 ಅಧ್ಯಾಪಕರಿಗೆ ವೃತ್ತಿ ಪದೋನ್ನತಿ ನೀಡುವ (CAS) ಸಂಬಂಧದ B.O.A./ Screening Cum Evaluation Committee ನಡಾವಳಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು.

ನಿರ್ಣಯ: ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಆದೇಶ ಸಂಖ್ಯೆ: F1-2/2017 (EC/PS), dated 18th July 2018 ರಲ್ಲಿ ಪ್ರಕಟಿಸಿರುವ UGC Regulations on Minimum Qualification for Appointment of Teachers and Other Academic Staff in Universities and Colleges and Measures for the Maintenance of Standards in Higher Education 2018, ಅನ್ವಯ ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳಿಗೆ ಹಿರಿಯ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ ನೀಡಲು ಅವಕಾಶವಿರುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಸುತ್ತೋಲೆಯ ಅನ್ವಯ ಕೆಲವು ಪ್ರಾಧ್ಯಾಪಕರು ಹಿರಿಯ ಪ್ರಾಧ್ಯಾಪಕ ಹುದ್ದೆಗೆ ವೃತ್ತಿಪದೋನ್ನತಿ ಕೋರಿ ಅರ್ಜಿ ಸಲ್ಲಿಸಿದ್ದರು. ಅವರಿಗೆ ಹಿರಿಯ ಪ್ರಾಧ್ಯಾಪಕರ ಹುದ್ದೆಗೆ ವೃತ್ತಿಪದೋನ್ನತಿಗಾಗಿ UGC Regulations on Minimum Qualification for Appointment of Teachers and Other Academic Staff in Universities and Colleges and Measures for the Maintenance of Standards in Higher Education 2018 ಪ್ರಕರಣ 5.1 (IV) ರನ್ವಯ ಆಯ್ಕೆ ಸಮಿತಿಯನ್ನು ರಚಿಸಲಾಗಿತ್ತು. ದಿನಾಂಕ: 02-06-2023, 03-06-2023 ಮತ್ತು 15-06-2023ರಂದು ನಡೆದ ಆಯ್ಕೆ ಸಮಿತಿಯ ಸಭೆಯಲ್ಲಿ ಯು.ಜಿ.ಸಿ. ನಿಯಮಾನುಸಾರ ಪರಿಶೀಲಿಸಿ, ಈ ಕೆಳಗಿನಂತೆ ಶಿಫಾರಸ್ಸು ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

| ಅಧ್ಯಾಪಕರ ಹೆಸರು | ವಿಭಾಗ | ಪ್ರಸ್ತುತ ಹುದ್ದೆ | ವೃತ್ತಿ ಪದೋನ್ನತಿಗೆ ಪರಿಗಣಿಸಿರುವುದು | ಶಿಫಾರಸ್ಸು ಮಾಡಿದ ಅರ್ಹತಾ ದಿನಾಂಕ |
|---|---|---|---|---|
| ಸ್ನಾತಕೋತ್ತರ ಅಧ್ಯಯನ ವಿಭಾಗಗಳು | | | | |
| ಪ್ರೊ.ಗುರುಲಿಂಗಯ್ಯ | ಸಮಾಜಶಾಸ್ತ್ರ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 21-07-2019 |
| ಪ್ರೊ.ಚಂದ್ರಶೇಖರ್,ಎಸ್., | ಸಮಾಜಶಾಸ್ತ್ರ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 01-02-2022 |
| ಪ್ರೊ.ಸೈಯದ್ ಅಶ್ಫಕ್ ಅಹ್ಮದ್ | ಅನ್ವಯಿಕ ಭೂವಿಜ್ಞಾನ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 30-09-2019 |
| ಪ್ರೊ.ಹೆಚ್.ಎಸ್. ಭೋಜ್ಯಾನಾಯ್ಕ | ಔದ್ಯೋಗಿಕ ರಸಾಯನಶಾಸ್ತ್ರ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 11-04-2019 |
| ಪ್ರೊ. ವೈ. ಅರ್ಥೋಜಿಬ ನಾಯಕ | ರಸಾಯನಶಾಸ್ತ್ರ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 11-05-2023 |
| ಪ್ರೊ. ವಿ. ಕೃಷ್ಣ | ಜೈವಿಕತಂತ್ರಜ್ಞಾನ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 04-06-2016 |
| ಪ್ರೊ. ರಿಯಾಜ್ ಮಹಮೂದ್ | ಜೈವಿಕತಂತ್ರಜ್ಞಾನ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 16-06-2016 |
| ಪ್ರೊ.ವೈ.ಎಲ್. ರಾಮಚಂದ್ರ | ಜೈವಿಕತಂತ್ರಜ್ಞಾನ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 23-01-2020 |
| ಪ್ರೊ.ರಾಜಾನಾಯಕ | ಸಸ್ಯಶಾಸ್ತ್ರ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 03-08-2021 |
| ಪ್ರೊ.ವೈ.ಎಲ್. ಕೃಷ್ಣಮೂರ್ತಿ | ಸಸ್ಯಶಾಸ್ತ್ರ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 03-08-2021 |
| ಪ್ರೊ.ಆರ್. ಹಿರೇಮಣಿ ನಾಯ್ಕ | ನಿರ್ವಹಣಾಶಾಸ್ತ್ರ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 01-04-2019 |
| ಪ್ರೊ.ಎಸ್.ಕೆ. ನರಸಿಂಹಮೂರ್ತಿ | ಗಣಿತಶಾಸ್ತ್ರ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 08-08-2021 |

| | | | | |
|---|---|---|---|---|
| ಪ್ರೊ.ಎಸ್.ಎನ್. ಯೋಗೀಶ್ | ಅರ್ಥಶಾಸ್ತ್ರ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 01–09–2018 |
| ಪ್ರೊ.ಎಸ್.ವಿ. ಕೃಷ್ಣಮೂರ್ತಿ | ಪರಿಸರವಿಜ್ಞಾನ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 15–07–2018 |
| ಪ್ರೊ.ಜಿ. ನಾರಾಯಣ | ಪರಿಸರವಿಜ್ಞಾನ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 17–02–2019 |
| ಪ್ರೊ. ಜಿ. ಪ್ರಶಾಂತ ನಾಯಕ | ಕನ್ನಡ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 03–06–2023 |
| ಪ್ರೊ.ರೇಚಲ್ ಕುರಿಯನ್ | ಇಂಗ್ಲಿಷ್ | ಪ್ರಾಧ್ಯಾಪಕ AGP - 14 | ಹಿರಿಯ ಪ್ರಾಧ್ಯಾಪಕ AGP - 15 | 11–05–2022 |

ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗದ ಅಧ್ಯಾಪಕರುಗಳ ಎ.ಜಿ.ಪಿ. ಬದಲಾವಣೆಗಾಗಿ ದಿನಾಂಕ:02–06–2023ರಂದು ನಡೆದ B.O.A./ Screening Cum Evaluation Committee ಸಭೆಗಳ ಶಿಫಾರಸ್ಸನ್ನು ಸಭೆಯು ಈ ಕೆಳಗಿನಂತೆ ಅನುಮೋದಿಸಿತು.

| ಅಧ್ಯಾಪಕರ ಹೆಸರು | ವಿಭಾಗ | ಎ.ಜಿ.ಪಿ. ಹಂತ | ಹಿಂದಿನ ಬಿ.ಓ.ಎ. ಶಿಫಾರಸು ಮಾಡಿದ ದಿನಾಂಕ | ಶಿಫಾರಸ್ಸು ಮಾಡಿದ ಪರಿಷ್ಕೃತ ಅರ್ಹತಾ ದಿನಾಂಕ |
|---|---|---|---|---|
| ಸ್ನಾತಕೋತ್ತರ ಅಧ್ಯಯನ ವಿಭಾಗಗಳು – ಅರ್ಹತಾ ದಿನಾಂಕ ಪರಿಷ್ಕರಣೆ | | | | |
| ಡಾ.ರವಿಕುಮಾರ್ | ಗಣಕವಿಜ್ಞಾನ | AGP – 6000 to 7000 | 31–03–2009 | 31–03–2008 |
| | | AGP – 7000 to 8000 | 01–04–2014 | 01–04–2013 |
| | | AGP – 8000 to 9000 | 31–03–2017 | 31–03–2016 |
| ಡಾ.ಸುರೇಶ, ಎಂ., | ಗಣಕವಿಜ್ಞಾನ | AGP – 6000 to 7000 | 23–10–2013 | 23–10–2012 |
| | | AGP – 7000 to 8000 | 22–10–2018 | 22–10–2017 |
| | | AGP – 8000 to 9000 | 22–10–2021 | 22–10–2020 |

ವಿಶ್ವವಿದ್ಯಾಲಯದ ಘಟಕ ಕಾಲೇಜಿನ ಅಧ್ಯಾಪಕರಿಗೆ ಸಹ–ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ಸಿ.ಎ.ಎಸ್., ಅಡಿಯಲ್ಲಿ ವೃತ್ತಿಪದೋನ್ನತಿಗಾಗಿ ದಿನಾಂಕ:02–06–2023ರಂದು ನಡೆದ ಬಿ.ಓ.ಎ., ಸಭೆಯ ಶಿಫಾರಸ್ಸು ಹಾಗೂ ಘಟಕ ಕಾಲೇಜಿನ ಸಹಾಯಕ ಪ್ರಾಧ್ಯಾಪಕರ ಎ.ಜಿ.ಪಿ., ಬದಲಾವಣೆಯ ವೃತ್ತಿಪದೋನ್ನತಿಗಾಗಿ ದಿನಾಂಕ:15–06–2023ರಂದು ನಡೆದ Screening Cum Evaluation ಸಮಿತಿ ಸಭೆಯು ಈ ಕೆಳಗಿನಂತೆ ಶಿಫಾರಸ್ಸು ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.

**ಘಟಕ ಕಾಲೇಜುಗಳ ಅಧ್ಯಾಪಕರ ವೃತ್ತಿಪದೋನ್ನತಿ.**

| ಅಧ್ಯಾಪಕರ ಹೆಸರು | ವಿಭಾಗ | ಪ್ರಸ್ತುತ ಹುದ್ದೆ | ವೃತ್ತಿ ಪದೋನ್ನತಿಗೆ ಪರಿಗಣಿಸಿರುವುದು | ಶಿಫಾರಸ್ಸು ಮಾಡಿದ ಅರ್ಹತಾ ದಿನಾಂಕ |
|---|---|---|---|---|
| ಘಟಕ ಕಾಲೇಜು: ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ | | | | |
| ಡಾ.ಬಿ.ಹೆಚ್. ಸತ್ಯನಾರಾಯಣ | ರಾಜ್ಯಶಾಸ್ತ್ರ | ಸಹ ಪ್ರಾಧ್ಯಾಪಕ Level 13(A) | ಪ್ರಾಧ್ಯಾಪಕ Level 14 | 14–02–2023 |
| ಘಟಕ ಕಾಲೇಜು: ಸಹ್ಯಾದ್ರಿ ವಿಜ್ಞಾನ ಕಾಲೇಜು | | | | |
| ಶ್ರೀ ಇಬ್ರಾಹಿಂ ಖಲೀಮುಲ್ಲ | ಇಂಗ್ಲಿಷ್ | ಸಹಾಯಕ ಪ್ರಾಧ್ಯಾಪಕ AGP - 11 | ಸಹಾಯಕ ಪ್ರಾಧ್ಯಾಪಕ AGP - 12 | 24–01–2019 |

2023–ಸಿಂ–4.06 ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಕನಿಷ್ಠ ವೇತನ ದರಗಳಂತೆ 'ಸಿ', 'ಡಿ' ಮತ್ತು ಇತರೆ ದರ್ಜೆಯ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುತ್ತಿರುವ ಮೆ: ಕೆ.ಎಸ್.ಎಫ್–9, ಬೆಂಗಳೂರು ಈ ಸಂಸ್ಥೆಯ ಕಾರ್ಯಾವಧಿಯನ್ನು ಮುಂದುವರೆಸುವ ಬಗ್ಗೆ.

ಚರ್ಚೆ: ಕುಲಸಚಿವರು ಮಾತನಾಡಿ, ವಿಶ್ವವಿದ್ಯಾಲಯದ ಜ್ಞಾನಸಹ್ಯಾದ್ರಿ ಆವರಣ, ಸ್ನಾತಕೋತ್ತರ ಕೇಂದ್ರಗಳು ಹಾಗೂ ಘಟಕ ಕಾಲೇಜುಗಳಿಗೆ ಅಗತ್ಯವಿರುವ 'ಸಿ', 'ಡಿ' ಮತ್ತು ಇತರೆ ದರ್ಜೆಯ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ನೀಡಲು ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಠ ವೇತನ ದರಗಳು ಹಾಗೂ ಸೇವಾ ಶುಲ್ಕ ಶೇಕಡ 03 ರಂತೆ ಮೆ॥ ಕೆ.ಎಸ್.ಎಫ್–9 ಕಾರ್ಪೊರೇಟ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು – ಇವರೊಂದಿಗೆ ದಿನಾಂಕ:23–06–2020 ರಿಂದ ಅನ್ವಯವಾಗುವಂತೆ 03 ವರ್ಷಗಳ ಅವಧಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಕರಾರು ಒಪ್ಪಂದದ ಪ್ರಕಾರ ಸದರಿ ಸಂಸ್ಥೆಯ ಸೇವಾ ಅವಧಿಯು ದಿನಾಂಕ:22–06–2023ರಂದು ಮುಕ್ತಾಯಗೊಳ್ಳಲಿದೆ. ಪ್ರಸ್ತುತ, ವಿಶ್ವವಿದ್ಯಾಲಯದಲ್ಲಿ ವಯೋನಿವೃತ್ತಿಯಿಂದಾಗಿ ಅಧ್ಯಾಪಕೇತರ ನೌಕರರ ಸಂಖ್ಯೆ ಕಡಿಮೆಯಾಗುತ್ತಿದ್ದು, ಆಡಳಿತದ ಹಿತದೃಷ್ಟಿಯಿಂದ ಕೆಲಸ ಕಾರ್ಯಗಳ ಸುಗಮ ನಿರ್ವಹಣೆಗಾಗಿ 'ಸಿ', 'ಡಿ' ಮತ್ತು ಇತರೆ ದರ್ಜೆಯ ಸಿಬ್ಬಂದಿಗಳ ಸೇವೆ ಪಡೆಯಲು ಕೆ.ಟಿ.ಪಿ.ಪಿ., ಕಾಯ್ದೆ 1999 ನಿಯಮ 2000ರನ್ವಯ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಠ ವೇತನ ದರಗಳಂತೆ ಸರ್ಕಾರದ ಇ ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಕರೆಯಲು ಹಾಗೂ ಟೆಂಡರ್ ಪ್ರಕ್ರಿಯೆಗಳು ಪೂರ್ಣಗೊಳ್ಳುವವರೆಗೆ ಮೆ॥ ಕೆ.ಎಸ್.ಎಫ್–9 ಕಾರ್ಪೊರೇಟ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಸಂಸ್ಥೆಯ ಕಾರ್ಯಾವಧಿಯನ್ನು ವಿಸ್ತರಿಸುವ ಸಲುವಾಗಿ ಅನುಮೋದನೆಗಾಗಿ ಮಂಡಿಸಿದೆ ಎಂದರು. ಸದಸ್ಯರಾದ ಶ್ರೀ ಎನ್. ಆರ್. ಮಂಜುನಾಥ ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಲಭ್ಯ ಹುದ್ದೆಗಳಿಗಿಂತ ಅಧಿಕ ಸಂಖ್ಯೆಯ ಸಿಬ್ಬಂದಿಗಳನ್ನು ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಂಡಿರುವುದರಿಂದ ಹೆಚ್ಚಿನ ಆರ್ಥಿಕ ಹೊರೆ ಭರಿಸುವುದು ಕಷ್ಟವಾಗುತ್ತಿದೆ. ಆದುದರಿಂದ, ಮಂಜೂರಾದ ಹುದ್ದೆಗಳಲ್ಲಿ ಖಾಲಿ ಇರುವ ಸಂಖ್ಯೆಯ ಹುದ್ದೆಗಳಿಗೆ ಮಾತ್ರ ಹೊರಗುತ್ತಿಗೆ ಮೂಲಕ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಹಾಗೂ ಹೊರಗುತ್ತಿಗೆ ಸಿಬ್ಬಂದಿಗಳ ವೇತನವನ್ನು ಭರಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಈ ಹಿಂದಿನ ಸಭೆಯಲ್ಲಿಯೇ ನಿರ್ಣಯವಾಗಿದ್ದು, ಅದರ ಪ್ರಕಾರ ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಿದರು.

ನಿರ್ಣಯ: ಚರ್ಚೆಯ ನಂತರ, ಸರ್ಕಾರದಿಂದ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆಗೆ ಸೀಮಿತಗೊಳಿಸಿ, ಸಿ. ಮತ್ತು ಡಿ., ಗ್ರೂಪ್ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯಲು ಕರ್ನಾಟಕ ಸರ್ಕಾರದ ಕೆ.ಟಿ.ಪಿ.ಪಿ., ನಿಯಮಾನುಸಾರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅನುಮತಿಸಿದ ಸಭೆಯು ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಪ್ರಸ್ತುತ ಹೊರ ಗುತ್ತಿಗೆ ಸೇವೆ ಒದಗಿಸುತ್ತಿರುವ ಮೆ॥ ಕೆ.ಎಸ್.ಎಫ್–9, ಕಾರ್ಪೊರೇಟ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಸಂಸ್ಥೆಯ ಕಾರ್ಯಾವಧಿಯನ್ನು ವಿಸ್ತರಿಸಲು ಅನುಮೋದಿಸಿತು ಹಾಗೂ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲವು ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಹೊರಗುತ್ತಿಗೆ ಸಿಬ್ಬಂದಿಗಳ ವೇತನವನ್ನು ಸರ್ಕಾರದಿಂದ ಪಡೆಯುವ ಸಲುವಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ನಿರ್ಣಯಿಸಲಾಯಿತು.

2023–ಸಿಂ–4.07: ಶ್ರೀ ಬಾರಿಕಾರ ಶಿವರಾಜ್, ಲ್ಯಾಬ್ ಅಸಿಸ್ಟೆಂಟ್ – ಇವರನ್ನು ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಳಿಸಿರುವುದನ್ನು ಸ್ಥಿರೀಕರಿಸುವ ಕುರಿತು.

ನಿರ್ಣಯ: ಶ್ರೀ ಬಾರಿಕಾರ ಶಿವರಾಜ್, ಲ್ಯಾಬ್ ಅಸಿಸ್ಟೆಂಟ್, ಸ್ನಾತಕೋತ್ತರ ಔದ್ಯೋಗಿಕ ರಸಾಯನಶಾಸ್ತ್ರ ಅಧ್ಯಯನ ವಿಭಾಗ ಇವರು ರಾಜ್ಯ ಸರ್ಕಾರದ ಪೊಲೀಸ್ ಇಲಾಖೆಯ ವಿಧಿವಿಜ್ಞಾನ

ಪ್ರಯೋಗಾಲಯದಲ್ಲಿನ ವೈಜ್ಞಾನಿಕ ಅಧಿಕಾರಿ ಹುದ್ದೆಗೆ ನೇಮಕಗೊಂಡಿರುವ ಹಿನ್ನೆಲೆಯಲ್ಲಿ, ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ದಿನಾಂಕ:13-06-2023ರಂದು ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಳಿಸಿರುವ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2023-ಸಿಂ-4.07(ಎ)** ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗದ ಎಸ್.ಟಿ. ಬ್ಯಾಕ್‌ಲಾಗ್ ಸಹಾಯಕ ಪ್ರಾಧ್ಯಾಪಕ ನೇಮಕಾತಿ ಮಂಡಳಿ ಸಭೆಯ ನಡಾವಳಿ ಅನುಮೋದನೆ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ಕರ್ನಾಟಕ ಘನ ಉಚ್ಚನ್ಯಾಯಾಲಯದ ಅಂತಿಮ ತೀರ್ಪು, ಯು.ಜಿ.ಸಿ., ರೆಗ್ಯುಲೇಶನ್, ಸರ್ಕಾರದ ಸುತ್ತೋಲೆ, ಆದೇಶಗಳು ಮತ್ತು ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದಿತವಾಗಿರುವ ವಿಶ್ವವಿದ್ಯಾಲಯದ ಅಧ್ಯಾಪಕರ ನೇಮಕಾತಿಯ ವಿನಿಯಮಗಳ ಅನುಸಾರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗದ ಬ್ಯಾಕ್‌ಲಾಗ್(ಎಸ್.ಟಿ.) ಸಹಾಯಕ ಪ್ರಾಧ್ಯಾಪಕ ಹುದ್ದೆಯ ನೇಮಕಾತಿಗಾಗಿ ದಿನಾಂಕ: 15-06-2023ರಂದು ನಡೆದ ಬಿ.ಓ.ಎ., ಸಭೆಯ ನಡಾವಳಿಯನ್ನು ಅನುಮೋದನೆಗಾಗಿ ಮಂಡಿಸಿದೆ ಎಂದರು. ಕುಲಸಚಿವ(ಮೌಲ್ಯಮಾಪನ)ರವರು ಮಾತನಾಡುತ್ತಾ, ಈ ನೇಮಕಾತಿಯಲ್ಲಿ ಅನೇಕ ಗೊಂದಲಗಳಿವೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಘನ ನ್ಯಾಯಾಲಯದ ಆದೇಶ Writ Petition No.55568/2017 (S-RES) ಪ್ರಕಾರ ಸದರಿ ಹುದ್ದೆಯ ನೇಮಕಾತಿಗಾಗಿ ಹೊಸ ಪ್ರಕಟಣೆ ಹೊರಡಿಸಲು ಅವಕಾಶ ಇರುವುದಿಲ್ಲ. ವಿಶ್ವವಿದ್ಯಾಲಯದ ಪ್ರಕಟಣೆ ಸಂಖ್ಯೆ: KU/HRM-1/3776/2017-18, dated:12-10-2017 ಅನ್ವಯವೇ ಪ್ರವೇಶ ಪರೀಕ್ಷೆ ನಡೆಸಿ ಉಳಿದ ಪ್ರಕ್ರಿಯೆಗಳನ್ನು ಯು.ಜಿ.ಸಿ. ನೇಮಕಾತಿ ನಿಯಮಗಳು, ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದಿತವಾಗಿರುವ ವಿಶ್ವವಿದ್ಯಾಲಯದ ವಿನಿಯಮ ಮತ್ತು ಸರ್ಕಾರದ ಆದೇಶಗಳನ್ವಯ ನಡೆಸಬೇಕಾಗಿದ್ದು, ನೇಮಕಾತಿಯ ಎಲ್ಲಾ ಹಂತಗಳಲ್ಲಿ ನಿಯಮ ಮತ್ತು ಆದೇಶಗಳನ್ನು ಪಾಲಿಸಲಾಗಿದೆ. ಅಲ್ಲದೆ, ಕರ್ನಾಟಕ ಸರ್ಕಾರದ ಸಮಾಜಕಲ್ಯಾಣ ಇಲಾಖೆಯು ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಪ್ರಥಮ ಆದ್ಯತೆಯ ಮೇಲೆ ತಕ್ಷಣವೇ ಭರ್ತಿ ಮಾಡಿ ಸರ್ಕಾರಕ್ಕೆ ವರದಿ ನೀಡುವಂತೆ ನಿರ್ದೇಶಿಸಿರುವುದರಿಂದ ಇದನ್ನು ತುರ್ತಾಗಿ ಭರ್ತಿ ಮಾಡುವ ಅಗತ್ಯವಿತ್ತು ಎಂದರು. ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥರವರು ಮಾತನಾಡಿ, ಸರ್ಕಾರ ಮತ್ತು ನ್ಯಾಯಾಲಯದಿಂದ ಯಾವುದಾದರೂ ಆಕ್ಷೇಪಣೆಗಳು ಬಂದಲ್ಲಿ, ಅಂತಿಮ ತೀರ್ಪಿಗೆ ಒಳಪಡುವುದಾಗಿ ನಮೂದಿಸಿ ನೇಮಕಾತಿ ಆದೇಶ ನೀಡುವಂತೆ ಹಾಗೂ ಇದನ್ನು ಅಭ್ಯರ್ಥಿಯಿಂದ ಮುಚ್ಚಳಿಕೆ ಬರೆಸಿಕೊಳ್ಳುವಂತೆ ತಿಳಿಸಿದರು. ಮುಂದುವರೆದು, ಇದರ ಮುಂದಿನ ಆಗುಹೋಗುಗಳಿಗೆ ವಿಶ್ವವಿದ್ಯಾಲಯವೇ ಜವಾಬ್ದಾರಿಯಾಗಬೇಕಾಗುತ್ತದೆ ಎಂದರು. ಉಳಿದ ಸದಸ್ಯರು ಇದಕ್ಕೆ ಸಹಮತ ವ್ಯಕ್ತಪಡಿಸಿದರು. ಆದರೆ, ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ ಇದಕ್ಕೆ ನನ್ನ ಅಸಮ್ಮತಿ ಇಲ್ಲ ಎಂದರು.

**ನಿರ್ಣಯ:** ಚರ್ಚೆಯ ನಂತರ, ವಿಶ್ವವಿದ್ಯಾಲಯದ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗದ ಬ್ಯಾಕ್‌ಲಾಗ್ (ಎಸ್.ಟಿ.) ಸಹಾಯಕ ಪ್ರಾಧ್ಯಾಪಕ ಹುದ್ದೆಯ ನೇಮಕಾತಿ ಸಂಬಂಧ ದಿನಾಂಕ:15-06-2023ರಂದು ನಡೆದ ನೇಮಕಾತಿ ಮಂಡಳಿಯ ಶಿಫಾರಸ್ಸಿನಂತೆ, ಈ ಕೆಳಕಂಡ ಅಭ್ಯರ್ಥಿಯ ಆಯ್ಕೆಯನ್ನು ಅನುಮೋದಿಸಿದ ಸಭೆಯು ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ನಿರ್ಣಯಿಸಿತು.

01. ಆಯ್ಕೆಯಾದ ಅಭ್ಯರ್ಥಿ: ಶ್ರೀ ಪ್ರದೀಪ, ಎಂ.
02. ಕಾಯ್ದಿರಿಸಿದ ಪಟ್ಟಿಯಲ್ಲಿರುವ ಅಭ್ಯರ್ಥಿ: ಶ್ರೀ ಸುಬ್ರಮಣ್ಯ, ಕೆ.,

## ಹಣಕಾಸು ವಿಭಾಗ

**2023-ಸಿಂ-4.08:** 2022-23ನೇ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:15-03-2023ರಂದು ನಡೆದ ವಿಶ್ವವಿದ್ಯಾಲಯದ 2022-23ನೇ ಸಾಲಿನ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸಲಾಯಿತು.

## ಎಸ್ಟೇಟ್ ವಿಭಾಗ

**2023–ಸಿಂ–4.09** ವಿಶ್ವವಿದ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ/ಸ್ವಚ್ಛತಾ/ತೋಟಗಾರಿಕೆ ಮತ್ತು ಗ್ಯಾಂಗ್‌ಮ್ಯಾನ್ – ಸಿಬ್ಬಂದಿಗಳ ಸೇವೆಯನ್ನು ಮುಂದುವರೆಸುವ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ, ಸರ್ಕಾರದಿಂದ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆಗೆ ಸೀಮಿತಗೊಳಿಸಿ, ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅಗತ್ಯವಿರುವ ಭದ್ರತಾ/ಸ್ವಚ್ಛತಾ/ತೋಟಗಾರಿಕೆ ಮತ್ತು ಗ್ಯಾಂಗ್‌ಮನ್ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಮೂಲಕ ಪಡೆಯಲು ಕರ್ನಾಟಕ ಸರ್ಕಾರದ ಕೆ.ಟಿ.ಪಿ.ಪಿ., ನಿಯಮಾನುಸಾರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅನುಮತಿಸಿದ ಸಭೆಯು ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಪ್ರಸ್ತುತ ಹೊರಗುತ್ತಿಗೆ ಸೇವೆ ಒದಗಿಸುತ್ತಿರುವ ಮೆ॥ ಕೆ.ಎಸ್.ಎಫ್–9, ಕಾರ್ಪೊರೇಟ್ ಸರ್ವೀಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಸಂಸ್ಥೆಯ ಕಾರ್ಯಾವಧಿಯನ್ನು ವಿಸ್ತರಿಸಲು ಅನುಮೋದಿಸಲಾಯಿತು ಹಾಗೂ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲವು ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಹೊರಗುತ್ತಿಗೆ ಸಿಬ್ಬಂದಿಗಳ ವೇತನವನ್ನು ಸರ್ಕಾರದಿಂದ ಪಡೆಯುವ ಸಲುವಾಗಿ ತಕ್ಷಣವೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ನಿರ್ಣಯಿಸಿತು.

## ಯು.ಸಿ.ಸಿ.ಎಫ್ ಮತ್ತು ಐಟಿ ಕೇಂದ್ರ

**2023–ಸಿಂ–4.10** ವಿಶ್ವವಿದ್ಯಾಲಯದಲ್ಲಿ ಸರ್ಕಾರದ ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯ ಅನುದಾನದಲ್ಲಿ ಅಳವಡಿಸಲಾಗಿರುವ ಸ್ಮಾರ್ಟ್ ಕ್ಲಾಸ್ ರೂಂ ಸೌಲಭ್ಯದ ವೆಚ್ಚವನ್ನು ಪಾವತಿಸುವ ಕುರಿತು ಅನುಮೋದನೆ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ಹಾಗೂ ಸಂಶೋಧನಾರ್ಥಿಗಳಿಗೆ ಮತ್ತು ಎಲ್ಲಾ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶೈಕ್ಷಣಿಕ ಮತ್ತು ಸಂಶೋಧನಾ ಸೌಲಭ್ಯಗಳನ್ನು ಒದಗಿಸಲು ಅಗತ್ಯವಿರುವ ಸ್ಮಾರ್ಟ್‌ಕ್ಲಾಸ್ ರೂಂ ಸೌಲಭ್ಯ ಒದಗಿಸುವ ಉದ್ದೇಶಕ್ಕಾಗಿ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ಎಸ್.ಸಿ.ಪಿ./ಟಿ.ಎಸ್.ಪಿ., ಯೋಜನೆಯ ಅಡಿಯಲ್ಲಿ ಒಟ್ಟು ರೂ.5.00 ಕೋಟಿಗಳನ್ನು ಮಂಜೂರು ಮಾಡಿದ್ದು, ಇದುವರೆಗೆ ಎರಡು ಕಂತುಗಳಲ್ಲಿ ರೂ.4.25ಕೋಟಿಗಳು (ರೂ.1.25+3.00) ಬಿಡುಗಡೆಯಾಗಿರುತ್ತದೆ. ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದಲ್ಲಿ ಪ್ರತಿ ಅಧ್ಯಯನ ವಿಭಾಗಕ್ಕೆ ರೂ.19,98,819/–ಗಳ ವೆಚ್ಚದಲ್ಲಿ ಒಟ್ಟು 20 ಅಧ್ಯಯನ ವಿಭಾಗಗಳಿಗೆ ಸ್ಮಾರ್ಟ್‌ಕ್ಲಾಸ್ ರೂಂ ಅಳವಡಿಕೆ ಕಾರ್ಯವನ್ನು ರೂ.4.00ಕೋಟಿಗಳ ವೆಚ್ಚದಲ್ಲಿ ಸರ್ಕಾರದ ಆದೇಶ ಮತ್ತು ಷರತ್ತುಗಳನುಸಾರ ಹಾಗೂ 4ಜಿ ವಿನಾಯಿತಿ ಇರುವ ಸರ್ಕಾರದ ಅಂಗಸಂಸ್ಥೆಯಾದ ಮೆ.ಕಿಯೋನಿಕ್ಸ್, ಬೆಂಗಳೂರು ಇವರ ವತಿಯಿಂದ ನಿರ್ವಹಿಸಲಾಗಿದ್ದು, ಸರ್ಕಾರದಿಂದ ಮೊದಲ ಕಂತಿನಲ್ಲಿ ಬಿಡುಗಡೆಯಾಗಿದ್ದ ಮೊಬಲಗಿನಲ್ಲಿ ಮೆ:ಕಿಯೋನಿಕ್ಸ್ ಸಂಸ್ಥೆಗೆ ರೂ.99,94,097/–ಗಳನ್ನು ಮೊದಲ ಕಂತಾಗಿ ಪಾವತಿಸಲಾಗಿದೆ. ಪ್ರಸ್ತುತ ಸ್ಮಾರ್ಟ್‌ಕ್ಲಾಸ್ ರೂಂ ಅಳವಡಿಕೆ ಕಾರ್ಯವು ಪೂರ್ಣಗೊಂಡಿರುವ ವಿಭಾಗಗಳಿಗೆ ಸಂಬಂಧಪಟ್ಟಂತೆ ಉಳಿಕೆ ಮೊಬಲಗು ರೂ.2,99,82,291/– (ಎರಡು ಕೋಟಿ ತೊಂಭತ್ತೊಂಭತ್ತು ಲಕ್ಷದ ಎಂಭತ್ತೆರಡು ಸಾವಿರದ ಇನ್ನೂರಾ ತೊಂಭತ್ತೊಂದು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸುವಂತೆ ಕೋರಿ ಬಿಲ್ಲನ್ನು ಸಲ್ಲಿಸಿದ್ದಾರೆ. ಸ್ಮಾರ್ಟ್‌ಕ್ಲಾಸ್ ರೂಂ ಸೌಲಭ್ಯವನ್ನು ಯಶಸ್ವಿಯಾಗಿ ಅಳವಡಿಸಿರುವ ಕುರಿತು ವಿಶ್ವವಿದ್ಯಾಲಯದಿಂದ ನೇಮಕ ಮಾಡಿದ್ದ ಪರಿಣಿತರ ತಂಡವು ಪರಿಶೀಲಿಸಿ, ಕಾರ್ಯಾದೇಶದನ್ವಯ ತೃಪ್ತಿಕರವಾಗಿ ಅಳವಡಿಕೆಯಾಗಿರುವ ಬಗ್ಗೆ ವರದಿಯನ್ನು ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ಎರಡನೇ ಕಂತಿನ ಮೊಬಲಗನ್ನು ಬಿಡುಗಡೆ ಮಾಡಲು ಅನುಮೋದನೆಗಾಗಿ ಮಂಡಿಸಿದೆ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡುತ್ತಾ, ಕಳೆದೆರಡು ವರ್ಷಗಳಿಂದ ಎಸ್.ಸಿ., ಎಸ್.ಟಿ. ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಿಲ್ಲ, ಫೆಲೋಶಿಪ್ ಅನುದಾನ ಕೂಡ ಬಂದಿಲ್ಲ. ಆದುದರಿಂದ ಎಸ್.ಸಿ., ಎಸ್.ಟಿ. ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಬಿಡುಗಡೆಯಾಗಿರುವ ಅನುದಾನವನ್ನು ಬೇರೆ

ಉದ್ದೇಶಕ್ಕೆ ಬಳಸಲು ಅವಕಾಶವಿಲ್ಲ ಎಂದರು. ಕುಲಸಚಿವರು ಮಾಹಿತಿ ನೀಡುತ್ತಾ, ಇದು ಸ್ಮಾರ್ಟ್‌ಕ್ಲಾಸ್ ರೂಂ ಸೌಲಭ್ಯಕ್ಕಾಗಿ ಮಾತ್ರ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನವಾಗಿರುವುದರಿಂದ ಇದನ್ನು ಕೂಡ ಬೇರೆ ಉದ್ದೇಶಕ್ಕೆ ಬಳಸಲು ಅವಕಾಶ ಇಲ್ಲವಾದ್ದರಿಂದ ಸರ್ಕಾರದ ಆದೇಶದಂತೆ ಅನುಷ್ಠಾನಗೊಳಿಸಲಾಗಿದೆ ಎಂದರು. ಡಾ.ಎ.ಟಿ.ಪದ್ಮೇಗೌಡರವರು ಮಾತನಾಡಿ ಇನ್ನೊಂದು ಸಮಿತಿಯನ್ನು ರಚಿಸಿ ಪರಿಶೀಲಿಸಿದ ನಂತರ ಕ್ರಮ ಕೈಗೊಳ್ಳಬಹುದು ಎಂದರು. ಕುಲಸಚಿವ(ಮೌಲ್ಯಮಾಪನ)ರವರು ಇದಕ್ಕೆ ಸಹಮತ ವ್ಯಕ್ತಪಡಿಸಿದರು. ಸದಸ್ಯರಾದ ಶ್ರೀ ಬಿ.ನಿರಂಜನಮೂರ್ತಿರವರು ಮಾತನಾಡಿ, ಈಗಾಗಲೇ ವಿಶ್ವವಿದ್ಯಾಲಯ ರಚಿಸಿದ್ದ ತಾಂತ್ರಿಕ ಸಮಿತಿ ವರದಿ ನೀಡಿರುವುದರಿಂದ ಮತ್ತೊಂದು ಸಮಿತಿ ರಚಿಸುವ ಅಗತ್ಯವಿಲ್ಲ. ಇದು ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆಯಾಗುವ ಯೋಜನೆಯಲ್ಲ. ಸರ್ಕಾರದ ಅನುದಾನದಿಂದ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮವಾಗಿದ್ದು, ವಿದ್ಯಾರ್ಥಿಗಳಿಗೆ ಅತ್ಯುನ್ನತ ದರ್ಜೆಯ ಸೌಲಭ್ಯ ದೊರೆಯುತ್ತಿದ್ದು, ಇದರಿಂದ, ಮುಂಬರುವ ನ್ಯಾಕ್ ಸಮಿತಿಯ ಭೇಟಿ ವೇಳೆಯಲ್ಲಿ ಕೂಡ ವಿಶ್ವವಿದ್ಯಾಲಯಕ್ಕೆ ಅನುಕೂಲವಾಗುತ್ತದೆ. ಆದುದರಿಂದ, ಅನುಮೋದನೆ ನೀಡಬಹುದು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಕರಾರು ಒಪ್ಪಂದ, ಸರಬರಾಜು ಆದೇಶದ ಪ್ರಕಾರ ಸ್ಮಾರ್ಟ್ ಕ್ಲಾಸ್ ರೂಂ ಸೌಲಭ್ಯ ಅಳವಡಿಕೆಯಾಗಿರುವ ಬಗ್ಗೆ ಖಚಿತಪಡಿಸಿಕೊಂಡು ಪಾವತಿಗೆ ಕ್ರಮ ಕೈಗೊಳ್ಳಬಹುದು ಎಂದರು. ಕುಲಸಚಿವ(ಮೌಲ್ಯಮಾಪನ) ಹಾಗೂ ಶ್ರೀ. ಎ.ಟಿ. ಪದ್ಮೇಗೌಡರವರು ಇದಕ್ಕೆ ತಮ್ಮ ಸಹಮತ ಇಲ್ಲ ಎಂದರು.

**ನಿರ್ಣಯ:** ಸುಧೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ಹಾಗೂ ಸಂಶೋಧನಾರ್ಥಿಗಳಿಗೆ ಮತ್ತು ಎಲ್ಲಾ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶೈಕ್ಷಣಿಕ ಮತ್ತು ಸಂಶೋಧನಾ ಸೌಲಭ್ಯಗಳನ್ನು ಒದಗಿಸಲು ಅಗತ್ಯವಿರುವ ಸ್ಮಾರ್ಟ್‌ಕ್ಲಾಸ್ ರೂಂ ಸೌಲಭ್ಯ ಒದಗಿಸುವ ಸಲುವಾಗಿ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಅನುದಾನದಿಂದ ಸರ್ಕಾರದ ಅಂಗಸಂಸ್ಥೆಯಾದ ಮೆ:ಕಿಯೋನಿಕ್ಸ್, ಬೆಂಗಳೂರು – ಇವರು ಸಿದ್ಧಪಡಿಸಿರುವ ಸ್ಮಾರ್ಟ್‌ಕ್ಲಾಸ್ ರೂಂಗಳು ವಿಶ್ವವಿದ್ಯಾಲಯ ನೀಡಿರುವ ಸರಬರಾಜು ಆದೇಶ ಹಾಗೂ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಕರಾರು ಒಪ್ಪಂದದ ಪ್ರಕಾರ ಇರುವ ಬಗ್ಗೆ ಖಚಿತಪಡಿಸಿಕೊಂಡು ಬಿಲ್ಲಿನ ಮೊಬಲಗು ರೂ.2,99,32,291/– (ಎರಡು ಕೋಟಿ ತೊಂಭತ್ತೊಂಭತ್ತು ಲಕ್ಷದ ಎಂಭತ್ತೆರಡು ಸಾವಿರದ ಇನ್ನೂರಾ ತೊಂಭತ್ತೊಂದು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸಲು ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

**2023–ಸಿಂ–4.10(ಎ)** ರೂ.53,10,000/–ಗಳನ್ನು ಕರ್ನಾಟಕ ಸರ್ಕಾರದ ಅಂಗಸಂಸ್ಥೆಯಾದ ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ ಇವರಿಗೆ ಪಾವತಿಸುವ ಕುರಿತು. ಕುರಿತು.

ದಿನಾಂಕ: 19–05–2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದಂತೆ ವಿಶ್ವವಿದ್ಯಾಲಯವು ರಚಿಸಿದ್ದ ಅಕಾಡೆಮಿಕ್ ಮ್ಯಾನೇಜ್‌ಮೆಂಟ್ ಸಾಫ್ಟ್‌ವೇರ್ ಕುರಿತಾಗಿ ಮತ್ತೊಮ್ಮೆ ಪರಿಶೀಲಿಸಲು ಸಾಫ್ಟ್‌ವೇರ್ ತಜ್ಞರು, ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಮಿತಿಯು ದಿನಾಂಕ: 22–05–2023ರಂದು ಸಭೆ ಸೇರಿ ವಿಷಯದ ಕುರಿತಾಗಿ ಕೂಲಂಕುಶವಾಗಿ ಪರಿಶೀಲಿಸಿ, ರೂ.45.00 ಲಕ್ಷಗಳು+ಜಿ.ಎಸ್.ಟಿ., ಸೇರಿದಂತೆ ಒಟ್ಟು ರೂ.53,10,000/– (ಐವತ್ಮೂರು ಲಕ್ಷದ ಹತ್ತು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಬಹುದೆಂದು ನಿರ್ಣಯಿಸಿರುವುದನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು.

## ದೂರ ಶಿಕ್ಷಣ ನಿರ್ದೇಶನಾಲಯ

**2023–ಸಿಂ–4.11** 2020–21ನೇ ಸಾಲಿನ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಿರುವ ಆನ್‌ಲೈನ್ ಪದವಿ ಕೋರ್ಸ್‌ಗಳಿಗೆ Learning Management System (LMS) ಅಳವಡಿಸಿಕೊಳ್ಳಲು ಟೆಂಡರ್ ಅನುಮೋದನೆ ಪಡೆದ ಸಂಸ್ಥೆಗೆ ಅನುಮೋದನೆ ನೀಡುವ ಕುರಿತು.

**ಚರ್ಚೆ:** ಕುಲಸಚಿವರು ವಿಷಯ ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದ ದೂರಶಿಕ್ಷಣ ನಿರ್ದೇಶನಾಲಯದಲ್ಲಿ ಯು.ಜಿ.ಸಿ.ಯ ಅನುಮೋದನೆ ಅನುಸಾರ 2020-21ನೇ ಸಾಲಿನಿಂದ ಆನ್‌ಲೈನ್ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆದ / ಪಡೆಯುವ ವಿದ್ಯಾರ್ಥಿಗಳಿಗೆ ಇ-ಪ್ಲಾಟ್‌ಫಾರ್ಮ್ ಮೂಲಕ ಶೈಕ್ಷಣಿಕ ಚಟುವಟಿಕೆಗಳನ್ನು ನೀಡಲು Learning Management System ನ್ನು ಸ್ಥಾಪಿಸುವ ಸಂಬಂಧ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿದ್ದು, ಇದರಲ್ಲಿ M/s Pheme Software Pvt. Ltd., Bangalore ಸಂಸ್ಥೆಯು ಎಲ್-1 ಆಗಿರುತ್ತಾರೆ. ಆದುದರಿಂದ, ಟೆಂಡರ್ ಪ್ರಕ್ರಿಯೆಯನ್ನು ಅನುಮೋದನೆಗಾಗಿ ಹಾಗೂ ಸದರಿ ಸಂಸ್ಥೆಗೆ ಪರ್ಚೇಸ್ ಆರ್ಡರ್ ನೀಡಲು ಮತ್ತು ಸಂಸ್ಥೆಯೊಂದಿಗೆ ಕರಾರು ಒಪ್ಪಂದ (ಎಂ.ಓ.ಎ) ಮಾಡಿಕೊಳ್ಳಲು ಸಭೆಯ ಅನುಮತಿಗಾಗಿ ಮಂಡಿಸಿದೆ ಎಂದರು. ಸದಸ್ಯರಾದ ಶ್ರೀ ಬಿ.ನಿರಂಜನಮೂರ್ತಿ ಹಾಗೂ ಶ್ರೀ ಎನ್.ಆರ್. ಮಂಜುನಾಥರವರು ಇದರ ಅಗತ್ಯತೆಯ ಮಾಹಿತಿ ನೀಡುವಂತೆ ಕೇಳಿದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಆನ್‌ಲೈನ್ ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ ನಡೆಸಿ ಸುಮಾರು ಎರಡು ವರ್ಷಗಳಾಗುತ್ತಾ ಬಂದಿದ್ದು, ವಿದ್ಯಾರ್ಥಿಗಳಿಗೆ ತರಗತಿಗಳನ್ನು ನಡೆಸಲಾಗಿದೆ. ಉಳಿದ ಪ್ರಕ್ರಿಯೆಗಾಗಿ ಸಾಫ್ಟ್‌ವೇರ್ ಅಗತ್ಯವಿದೆ. ಯು.ಜಿ.ಸಿ. ನಿಯಮಗಳನ್ವಯ ಕೂಡ ಎಲ್.ಎಂ.ಎಸ್. ಸಾಫ್ಟ್‌ವೇರ್ ಮೂಲಕವೇ ಆನ್‌ಲೈನ್‌ಕೋರ್ಸ್‌ಗಳನ್ನು ನಡೆಸಬೇಕಾಗಿದೆ ಎಂದರು. ಸದಸ್ಯರಾದ ಡಾ.ಸಂಧ್ಯಾಕಾವೇರಿರವರು ಮಾತನಾಡಿ, ಮುಂದೆ ಯಾವುದೇ ಸಮಸ್ಯೆಗಳು ಉದ್ಭವಿಸದಂತೆ ಸ್ಪಷ್ಟವಾಗಿ ಎಂ.ಓ.ಎ. ಮಾಡಿಕೊಳ್ಳುವಂತೆ ಸಲಹೆ ನೀಡಿದರು. ಎಲ್ಲಾ ಸದಸ್ಯರು ಇದಕ್ಕೆ ಸಹಮತ ವ್ಯಕ್ತಪಡಿಸಿದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ದೂರಶಿಕ್ಷಣ ನಿರ್ದೇಶನಾಲಯದಲ್ಲಿ ಯು.ಜಿ.ಸಿ.ಯ ಅನುಮೋದನೆ ಅನುಸಾರ ಆರಂಭಿಸಿರುವ ಆನ್‌ಲೈನ್ ಪದವಿ ಕೋರ್ಸ್‌ಗಳಿಗೆ ಪ್ರವೇಶ ಪಡೆದ / ಪಡೆಯುವ ವಿದ್ಯಾರ್ಥಿಗಳಿಗೆ ಇ-ಪ್ಲಾಟ್‌ಫಾರ್ಮ್ ಮೂಲಕ ಶೈಕ್ಷಣಿಕ ಚಟುವಟಿಕೆಗಳನ್ನು ನೀಡಲು Learning Management System ನ್ನು ಸ್ಥಾಪಿಸುವ ಸಂಬಂಧ ನಡೆಸಲಾದ ಇ-ಟೆಂಡರ್ ಪ್ರಕ್ರಿಯೆಯನ್ನು ಅನುಮೋದಿಸಿದ ಸಭೆಯು, ಎಲ್-1 ಆಗಿರುವ ಸಂಸ್ಥೆಯಾದ M/s Pheme Software Pvt. Ltd., Bangaore ಇವರಿಗೆ ಪರ್ಚೇಸ್ ಆರ್ಡರ್ ನೀಡಲು ಮತ್ತು ಸಂಸ್ಥೆಯೊಂದಿಗೆ ಕರಾರು ಒಪ್ಪಂದ (ಎಂ.ಓ.ಎ) ಮಾಡಿಕೊಳ್ಳಲು ಸಭೆಯು ಅನುಮೋದಿಸಿತು.

## ಪರೀಕ್ಷಾ ವಿಭಾಗ

**2023-ಸಿಂ-4.12** ರೆಗ್ಯೂಲರ್ ಮತ್ತು ದೂರ ಶಿಕ್ಷಣದ ವಿವಿಧ ಸ್ನಾತಕ/ಸ್ನಾತಕೋತ್ತರ ಪರೀಕ್ಷೆಗಳಿಗೆ ಸಂಬಂಧಿಸಿದ ಶುಲ್ಕಗಳನ್ನು ಪರಿಷ್ಕರಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ರೆಗ್ಯುಲರ್ ಮತ್ತು ದೂರ ಶಿಕ್ಷಣದ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳಿಗೆ ಸಂಬಂಧಿಸಿದ ಪರೀಕ್ಷಾ ಶುಲ್ಕ, ಅಂಕಪಟ್ಟಿ ಶುಲ್ಕ, ಪದವಿ ಪ್ರಮಾಣಪತ್ರ, ತಾತ್ಕಾಲಿಕ ಉತ್ತೀರ್ಣತಾ ಪ್ರಮಾಣ ಪತ್ರ, ನೈಜತೆ ಪರಿಶೀಲನಾ ಶುಲ್ಕ ಸೇರಿದಂತೆ ಎಲ್ಲಾ ಶುಲ್ಕಗಳನ್ನು 2023-24ನೇ ಸಾಲಿನಿಂದ ಅನ್ವಯಿಸುವಂತೆ ಪರಿಷ್ಕರಿಸಿ ಶೇ 10 ರಷ್ಟು ಹೆಚ್ಚಳ ಮಾಡಲು ಸಭೆಯು ಅನುಮೋದನೆ ನೀಡಿತು.

## ಅಭಿವೃದ್ಧಿ ವಿಭಾಗ

**2023-ಸಿಂ-4.13** ಡಾ. ವೈ.ಎಲ್. ಕೃಷ್ಣಮೂರ್ತಿ, ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ ಇವರು Universidade do Minho, Braga, Portugal ಇಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮೋದನೆ ನೀಡುವ ಕುರಿತು.

**ನಿರ್ಣಯ:** ಡಾ. ವೈ.ಎಲ್. ಕೃಷ್ಣಮೂರ್ತಿ, ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ ಇವರು ದಿನಾಂಕ:09-07-2023 ರಿಂದ 12-07-2023ರವರೆಗೆ Universidade do Minho, Braga, Portugal ಇಲ್ಲಿ ನಡೆಯುವ Iberian Plant Biology Congress 2023 ಅಂತರರಾಷ್ಟ್ರೀಯ

ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿಸಿದ ಸಭೆಯು ಪ್ರಯಾಣದ ದಿನಗಳು ಸೇರಿದಂತೆ ದಿನಾಂಕ: 06-07-2023 ರಿಂದ 15-07-2023ರವರೆಗೆ ಅನ್ಯಕಾರ್ಯನಿಮಿತ್ತ ರಜೆ ಮಂಜೂರು ಮಾಡಲು ಹಾಗೂ ವಿಶ್ವವಿದ್ಯಾಲಯದ ಆರ್ಥಿಕ ಲಭ್ಯತೆಯ ಅನುಸಾರ ನಿಯಮಾನುಸಾರ ಪರಿಶೀಲಿಸಿ ಪಾವತಿಸಲು ಅನುಮೋದಿಸಲಾಯಿತು.

## ದಾಸ್ತಾನು ಖರೀದಿ ವಿಭಾಗ

2023-ಸಿಂ-4.14 ವಿಶ್ವವಿದ್ಯಾಲಯ ಆರೋಗ್ಯ ಕೇಂದ್ರಕ್ಕೆ ಔಷಧಿ ಮತ್ತು ಕೆಮಿಕಲ್ಸ್‌ಗಳನ್ನು ಇ-ಟೆಂಡರ್ ಆಹ್ವಾನಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಔಷಧಿ ಮತ್ತು ಲ್ಯಾಬೋರೇಟರಿ ಕೆಮಿಕಲ್ಸ್‌ಗಳನ್ನು ಖರೀದಿಸುವ ಸಲುವಾಗಿ ಇ-ಟೆಂಡರ್ ಮೂಲಕ ಆಯ್ಕೆಯಾಗಿದ್ದ ಮೆ: ಬಾಲಾಜಿ ಫಾರ್ಮ, ಶಿವಮೊಗ್ಗ ಇವರೊಂದಿಗೆ ಮಾಡಿಕೊಂಡಿದ್ದ 2ವರ್ಷಗಳ ಕರಾರು ಒಪ್ಪಂದದ ಅವಧಿಯು ದಿನಾಂಕ:29-06-2023ಕ್ಕೆ ಮುಕ್ತಾಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಕೆ.ಟಿ.ಪಿ.ಪಿ., ನಿಯಮಗಳನ್ವಯ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅನುಮತಿಸಿದ ಸಭೆಯು, ಹೊಸ ಇ-ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಮೆ.ಬಾಲಾಜಿ ಫಾರ್ಮ, ಶಿವಮೊಗ್ಗ ಇವರಿಂದ ಹಿಂದಿನ ಕರಾರು ಒಪ್ಪಂದದಂತೆ ಔಷಧಿ ಮತ್ತು ಲ್ಯಾಬೋರೇಟರಿ ಕೆಮಿಕಲ್ಸ್‌ಗಳನ್ನು ಖರೀದಿಸಲು ಅನುಮೋದನೆ ನೀಡಿತು.

2023-ಸಿಂ-4.15 ಈ-ಟೆಂಡರ್ ಮೂಲಕ ವಿಶ್ವವಿದ್ಯಾಲಯಕ್ಕೆ ಪೀಠೋಪಕರಣಗಳನ್ನು ಖರೀದಿಸುವ ದರ ಒಪ್ಪಂದದ ಆದೇಶವನ್ನು ಮುಂದುವರೆಸುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾಲಯದ ವಿಭಾಗಗಳು, ಕಛೇರಿ, ಘಟಕ ಕಾಲೇಜುಗಳಿಗೆ ಅಗತ್ಯವಿರುವ ಪೀಠೋಪಕರಣಗಳನ್ನು ಖರೀದಿಸುವ ಸಲುವಾಗಿ ಇ-ಟೆಂಡರ್ ಮೂಲಕ ಆಯ್ಕೆಯಾಗಿದ್ದ ಮೆ: ಗುರು ಇಂಟೀರಿಯರ್ಸ್, ಶಿವಮೊಗ್ಗ ಇವರೊಂದಿಗೆ ಮಾಡಿಕೊಂಡಿದ್ದ 2 ವರ್ಷಗಳ ಕರಾರು ಒಪ್ಪಂದದ ಅವಧಿಯು ದಿನಾಂಕ:30-06-2023ಕ್ಕೆ ಮುಕ್ತಾಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ಕೆ.ಟಿ.ಪಿ.ಪಿ., ನಿಯಮಗಳನ್ವಯ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅನುಮತಿಸಿದ ಸಭೆಯು, ಹೊಸ ಇ-ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಮೆ: ಗುರು ಇಂಟೀರಿಯರ್ಸ್, ಶಿವಮೊಗ್ಗ ಇವರಿಂದ ಹಿಂದಿನ ಕರಾರು ಒಪ್ಪಂದದಂತೆ ಪೀಠೋಪಕರಣಗಳನ್ನು ಖರೀದಿಸಲು ಅನುಮೋದನೆ ನೀಡಿತು.

2023-ಸಿಂ-4.16 ಇ-ಟೆಂಡರ್ ಮೂಲಕ ವಿಶ್ವವಿದ್ಯಾಲಯಕ್ಕೆ ಮುದ್ರಣ ಮತ್ತು ಲೇಖನ ಸಾಮಗ್ರಿಗಳನ್ನು ಖರೀದಿಸುವ ದರ ಒಪ್ಪಂದದ ಆದೇಶವನ್ನು ಮುಂದುವರೆಸುವ ಬಗ್ಗೆ.

**ನಿರ್ಣಯ:** ವಿಶ್ವವಿದ್ಯಾಲಯದ ವಿಭಾಗಗಳು, ಕಛೇರಿ, ಘಟಕ ಕಾಲೇಜುಗಳಿಗೆ ದೈನಂದಿನ ಕೆಲಸಕಾರ್ಯಗಳಿಗೆ ಅಗತ್ಯವಿರುವ ಮುದ್ರಣ ಮತ್ತು ಲೇಖನಸಾಮಗ್ರಿಗಳನ್ನು ಖರೀದಿಸುವ ಸಲುವಾಗಿ ಇ-ಟೆಂಡರ್ ಮೂಲಕ ಆಯ್ಕೆಯಾಗಿದ್ದ ಶ್ರೀ ಮಲ್ಲೇಶ್ವರ ಎಂಟರ್‌ಪ್ರೈಸಸ್, ಭದ್ರಾವತಿ ಇವರೊಂದಿಗೆ ಮಾಡಿಕೊಂಡಿದ್ದ 2 ವರ್ಷಗಳ ಕರಾರು ಒಪ್ಪಂದದ ಅವಧಿಯು ದಿನಾಂಕ:24-10-2023ಕ್ಕೆ ಮುಕ್ತಾಯಗೊಳದಳಲಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಕೆ.ಟಿ.ಪಿ.ಪಿ., ನಿಯಮಗಳನ್ವಯ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅನುಮತಿಸಿದ ಸಭೆಯು, ಹೊಸ ಇ-ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಶ್ರೀ ಮಲ್ಲೇಶ್ವರ ಎಂಟರ್‌ಪ್ರೈಸಸ್, ಭದ್ರಾವತಿ ಇವರಿಂದ ಹಿಂದಿನ ಕರಾರು ಒಪ್ಪಂದದಂತೆ ಮುದ್ರಣ ಮತ್ತು ಲೇಖನಸಾಮಗ್ರಿಗಳನ್ನು ಖರೀದಿಸಲು ಅನುಮೋದನೆ ನೀಡಿತು.

2023-ಸಿಂ-4.17 ಇ-ಟೆಂಡರ್ ಮೂಲಕ ವಿಶ್ವವಿದ್ಯಾಲಯದ ಸ್ನಾತಕ/ಸ್ನಾತಕೋತ್ತರ ವಿಭಾಗಗಳಿಗೆ ಅಗತ್ಯ ಕೆಮಿಕಲ್ಸ್, ಗ್ಲಾಸ್‌ವೇರ್ಸ್ & ಲಘು ಉಪಕರಣಗಳನ್ನು ಖರೀದಿಸುವ ದರ ಒಪ್ಪಂದದ ಆದೇಶವನ್ನು

ಮುಂದುವರೆಸುವ ಬಗ್ಗೆ.

ನಿರ್ಣಯ: ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಮತ್ತು ಘಟಕ ಕಾಲೇಜುಗಳ ಪ್ರಯೋಗಾಲಯಗಳಿಗೆ ಅಗತ್ಯವಿರುವ ಕೆಮಿಕಲ್ಸ್, ಗ್ಲಾಸ್‌ವೇರ್ಸ್, ಪ್ಲಾಸ್ಟಿಕ್‌ವೇರ್ಸ್ ಮತ್ತು ಲಘು ಉಪಕರಣಗಳನ್ನು ಖರೀದಿಸುವ ಸಲುವಾಗಿ ಇ-ಟೆಂಡರ್ ಮೂಲಕ ಆಯ್ಕೆಯಾಗಿದ್ದ ಮೂರು ಸರಬರಾಜು ಸಂಸ್ಥೆಗಳಾದ 1) ಮೆ.ಜೈನ್ ಸ್ಪೋರ್ಟ್ಸ್ ಅಂಡ್ ಸೈಂಟಿಫಿಕ್, ಶಿವಮೊಗ್ಗ 2) ಶ್ರೀ ದುರ್ಗಾ ಲ್ಯಾಬೋರೇಟರಿ ಇಕ್ವಿಪ್‌ಮೆಂಟ್ ಸಪ್ಲೈಸ್, ಮಂಗಳೂರು ಮತ್ತು 3) ಶ್ರೀ ಮಹಾಲಸ ಏಜನ್ಸೀಸ್, ಮಂಗಳೂರು ಇವರೊಂದಿಗೆ ಮಾಡಿಕೊಂಡಿದ್ದ 2 ವರ್ಷಗಳ ಕರಾರು ಒಪ್ಪಂದದ ಅವಧಿಯು ದಿನಾಂಕ:24-08-2023ಕ್ಕೆ ಮುಕ್ತಾಯಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಕೆ.ಟಿ.ಪಿ.ಪಿ., ನಿಯಮಗಳನ್ವಯ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಅನುಮತಿಸಿದ ಸಭೆಯು, ಹೊಸ ಇ-ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಮೂರು ಸರಬರಾಜು ಸಂಸ್ಥೆಗಳಾದ 1) ಮೆ.ಜೈನ್ ಸ್ಪೋರ್ಟ್ಸ್ ಅಂಡ್ ಸೈಂಟಿಫಿಕ್, ಶಿವಮೊಗ್ಗ 2). ಶ್ರೀ ದುರ್ಗಾ ಲ್ಯಾಬೋರೇಟರಿ ಇಕ್ವಿಪ್‌ಮೆಂಟ್ ಸಪ್ಲೈಸ್, ಮಂಗಳೂರು ಮತ್ತು 3) ಶ್ರೀ ಮಹಾಲಸ ಏಜನ್ಸೀಸ್, ಮಂಗಳೂರು ಇವರಿಂದ ಹಿಂದಿನ ಕರಾರು ಒಪ್ಪಂದದಂತೆ ಅಧ್ಯಯನ ವಿಭಾಗಗಳು ಮತ್ತು ಘಟಕ ಕಾಲೇಜುಗಳ ಪ್ರಯೋಗಾಲಯಗಳಿಗೆ ಅಗತ್ಯವಿರುವ ಕೆಮಿಕಲ್ಸ್, ಗ್ಲಾಸ್‌ವೇರ್ಸ್, ಪ್ಲಾಸ್ಟಿಕ್‌ವೇರ್ಸ್ ಮತ್ತು ಲಘು ಉಪಕರಣಗಳನ್ನು ಖರೀದಿಸಲು ಅನುಮೋದನೆ ನೀಡಿತು ಹಾಗೂ ಇನ್ನು ಮುಂದೆ ಯಾವುದೇ ಇ-ಟೆಂಡರ್ ಮೂಲಕ ಆಯ್ಕೆಯಾಗಿ ಕರಾರು ಒಪ್ಪಂದದ ಅವಧಿಯು ಮುಕ್ತಾಯವಾಗುವ ಕನಿಷ್ಠ 6 ತಿಂಗಳು ಮುಂಚಿತವಾಗಿ ಟೆಂಡರ್ ಪ್ರಕ್ರಿಯೆ ಆರಂಭಿಸಬೇಕೆಂದು ನಿರ್ಣಯಿಸಲಾಯಿತು.

## ಶೈಕ್ಷಣಿಕ ವಿಭಾಗ

**2023-ಸಿಂ-4.18** "Hoysala Karnataka Parisara" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ದಾನಿಗಳಾದ ಹೊಯ್ಸಳ ಕರ್ನಾಟಕ ಪತ್ತಿನ ಸೌಹಾರ್ದ ಸಹಕಾರ ಸಂಘ, ಜೈಲ್ ರಸ್ತೆ, ಶಿವಮೊಗ್ಗ ಇವರು ಕುವೆಂಪು ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದಡಿಯಲ್ಲಿನ ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ (ಎಂ.ಎಸ್ಸಿ.-ಪರಿಸರ ವಿಜ್ಞಾನ)ವಿಷಯದಲ್ಲಿ (ರೆಗ್ಯುಲರ್) ಪ್ರಥಮ ರ‍್ಯಾಂಕ್ ಪಡೆದ ವಿದ್ಯಾರ್ಥಿಗೆ "ಹೊಯ್ಸಳ ಕರ್ನಾಟಕ ಪರಿಸರ" ಹೆಸರಿನಲ್ಲಿ ವಿಶ್ವವಿದ್ಯಾಲಯದ 33ನೇ ಘಟಿಕೋತ್ಸವದಿಂದ ಸ್ವರ್ಣ ಪದಕ ನೀಡುವ ಸಲುವಾಗಿ ದತ್ತಿನಿಧಿ ಸ್ವರ್ಣಪದಕ ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು.

**2023-ಸಿಂ-4.18(ಎ)** "Baseerunnisa Nazeer Pasha" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ದಾನಿಗಳಾದ ಡಾ. ಹಫೀಜ್ ಕರ್ನಾಟಕಿ ಬಿನ್ ನಜೀರ್ ಪಾಶ, ಜಯನಗರ 1ನೇ ತಿರುವು, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಇವರು ಕುವೆಂಪು ವಿಶ್ವವಿದ್ಯಾಲಯದ ಕಲಾ ನಿಕಾಯದಡಿಯಲ್ಲಿನ ಸ್ನಾತಕೋತ್ತರ ಉರ್ದು ಅಧ್ಯಯನ (ಎಂ.ಎ.-ಉರ್ದು) ವಿಷಯದಲ್ಲಿ (ರೆಗ್ಯುಲರ್) ಪ್ರಥಮ ರ‍್ಯಾಂಕ್ ಪಡೆದ ವಿದ್ಯಾರ್ಥಿಗೆ "ಬಶೀರುನ್ನೀಸ ನಜೀರ್ ಪಾಶ" ಹೆಸರಿನಲ್ಲಿ ವಿಶ್ವವಿದ್ಯಾಲಯದ 33ನೇ ಘಟಿಕೋತ್ಸವದಿಂದ ಸ್ವರ್ಣ ಪದಕ ನೀಡುವ ಸಲುವಾಗಿ ದತ್ತಿನಿಧಿ ಸ್ವರ್ಣಪದಕ ಸ್ಥಾಪಿಸಲು ಸಭೆಯು ಅನುಮೋದನೆ ನೀಡಿತು.

**2023-ಸಿಂ-4.18(ಬಿ)** "Dr. Hafiz Karnataki" ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

ದಾನಿಗಳಾದ ಡಾ. ಹಫೀಜ್ ಕರ್ನಾಟಕಿ ಬಿನ್ ನಜೀರ್ ಪಾಶ, ಜಯನಗರ 1ನೇ ತಿರುವು, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ಇವರು ಕುವೆಂಪು ವಿಶ್ವವಿದ್ಯಾಲಯದ ಕಲಾ ನಿಕಾಯದಡಿಯಲ್ಲಿನ ಸ್ನಾತಕೋತ್ತರ ಕನ್ನಡ ಅಧ್ಯಯನ (ಎಂ.ಎ.-ಕನ್ನಡ) ವಿಷಯದಲ್ಲಿ (ರೆಗ್ಯುಲರ್) ಪ್ರಥಮ ರ‍್ಯಾಂಕ್ ಪಡೆದ ವಿದ್ಯಾರ್ಥಿಗೆ "ಡಾ.ಹಫೀಜ್ ಕರ್ನಾಟಕಿ" ಹೆಸರಿನಲ್ಲಿ ವಿಶ್ವವಿದ್ಯಾಲಯದ 33ನೇ

ಘಟಿಕೋತ್ಸವದಿಂದ ಸ್ವರ್ಣ ಪದಕ ನೀಡುವ ಸಲುವಾಗಿ ದತ್ತಿನಿಧಿ ಸ್ವರ್ಣಪದಕ ಸ್ಥಾಪಿಸಲು ಸಭೆಯು ಅನೋದನೆ ನೀಡಿತು.

2023-ಸಿಂ-4.19 **ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ**

ಕುವೆಂಪು ವಿಶ್ವವಿದ್ಯಾಲಯದ ನೂತನ ಕುಲಪತಿಗಳ ಆಯ್ಕೆಗಾಗಿ ಶೋಧನಾ ಸಮಿತಿಗೆ ಸಿಂಡಿಕೇಟ್ ಪ್ರತಿನಿಧಿಯನ್ನು ನಾಮನಿರ್ದೇಶನಗೊಳಿಸುವ ಕುರಿತು.

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರ ಸಂಖ್ಯೆ: ಇಡಿ 32 ಯುಎಸ್‌ವಿ. 2023, ದಿನಾಂಕ:13-06-2023ರಲ್ಲಿ ಕೇಳಿರುವಂತೆ ಮಾನ್ಯ ಕುಲಪತಿಯವರಾದ ಪ್ರೊ.ಬಿ.ಪಿ. ವೀರಭದ್ರಪ್ಪ ಇವರ ಅಧಿಕಾರಾವಧಿಯು ದಿನಾಂಕ:01-08-2023ಕ್ಕೆ ಮುಕ್ತಾಯಗೊಳ್ಳಲಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 14(2)ರಡಿಯಲ್ಲಿ ನೂತನ ಕುಲಪತಿಯವರ ನೇಮಕಾತಿಗಾಗಿ ಸರ್ಕಾರವು ರಚಿಸಲಿರುವ ಶೋಧನಾ ಸಮಿತಿಗೆ ಕುವೆಂಪು ವಿಶ್ವವಿದ್ಯಾಲಯದ ಪ್ರತಿನಿಧಿಯನ್ನು ಸರ್ವಾನುಮತದಿಂದ ನಾಮನಿರ್ದೇಶನ ಮಾಡಿದ ಸಭೆಯು, ಪ್ರತಿನಿಧಿಯ ಹೆಸರನ್ನು ಮುಚ್ಚಿದ ಲಕೋಟೆಯಲ್ಲಿ ಕುಲಪತಿಯವರ ಕಛೇರಿಯಲ್ಲಿ ರಹಸ್ಯವಾಗಿ ಸಂರಕ್ಷಿಸಿ ಇಡಲು ಮತ್ತು ಆಯ್ಕೆ ಮಾಡಿದ ಪ್ರತಿನಿಧಿಯ ಹೆಸರನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮತಿಸಿತು.

2023-ಸಿಂ-4.20 **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

2023-ಸಿಂ-4.20(ಎ) ಸದಸ್ಯರಾದ ಡಾ.ಸಂಧ್ಯಾಕಾವೇರಿರವರು ಮಾತನಾಡಿ, ಸಂಯೋಜಿತ ಕಾಲೇಜಿನವರು 2022-23ನೇ ಸಾಲಿನಲ್ಲಿ ಹೆಚ್ಚುವರಿಯಾಗಿ ಪಾವತಿಸಿರುವ ಪ್ರವೇಶ ಶುಲ್ಕವನ್ನು ಈವರೆಗೂ ವಿಶ್ವವಿದ್ಯಾಲಯವು ಕಾಲೇಜುಗಳಿಗೆ ಮರುಭರಿಕೆ ಮಾಡಿರುವುದಿಲ್ಲ. ಇದರಿಂದಾಗಿ ಕಾಲೇಜುಗಳಲ್ಲಿ ತೊಂದರೆಯಾಗುತ್ತಿರುವುದರಿಂದ ಕಾಲಮಿತಿಯೊಳಗೆ ಮರುಭರಿಕೆ ಮಾಡುವಂತೆ ಕೋರಿದರು. ಈ ಬಗ್ಗೆ ಪರಿಶೀಲಿಸಿ ತಕ್ಷಣವೇ ಮರುಭರಿಕೆ ಮಾಡಲು ಕ್ರಮ ಕೈಗೊಳ್ಳುವುದಾಗಿ ಮಾನ್ಯ ಕುಲಪತಿಯವರು ತಿಳಿಸಿದರು. ಶ್ರೀ ಎನ್.ಆರ್. ಮಂಜುನಾಥರವರು ಮಾತನಾಡಿ, ಹೀಗೆ ಹೆಚ್ಚುವರಿ ಶುಲ್ಕಗಳನ್ನು ವರ್ಷಗಟ್ಟಲೆ ಮರುಭರಿಕೆ ಮಾಡದಿದ್ದಲ್ಲಿ ಕಾಲೇಜುಗಳಲ್ಲಿ ಹಲವು ರೀತಿಯ ಆಡಳಿತಾತ್ಮಕ ತೊಂದರೆಗಳಾಗುತ್ತವೆ. ಆದುದರಿಂದ, ಇನ್ನು ಮುಂದೆ ಪ್ರವೇಶ ಮುಗಿದ ಒಂದು ವಾರದೊಳಗೆ ಹೆಚ್ಚುವರಿ ಶುಲ್ಕವನ್ನು ಕಾಲೇಜುಗಳಿಗೆ ಹಿಂಪಾವತಿಸಬೇಕು. ತಪ್ಪಿದಲ್ಲಿ ಹಣಕಾಸು ಅಧಿಕಾರಿಗಳು ವಿಳಂಬಕ್ಕೆ ಜವಾಬ್ದಾರರಾಗಬೇಕಾಗುತ್ತದೆ ಎಂದು ನಿರ್ಣಯಿಸಲಾಯಿತು.

2023-ಸಿಂ-4.20(ಬಿ) ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡುತ್ತಾ, ಪ್ರಸ್ತುತ ಹಣಕಾಸು ಅಧಿಕಾರಿಯಾಗಿ ನೇಮಕಗೊಂಡು ಕರ್ತವ್ಯ ನಿರ್ವಹಿಸುತ್ತಿರುವವರ ವಿರುದ್ಧ ಗಂಭೀರ ಆರೋಪವಿರುವುದಾಗಿ ಪತ್ರ ಬಂದಿದ್ದು, ಅದರೊಂದಿಗೆ ಸಿಂಡಿಕೇಟ್ ಸಭೆಯ ನಡಾವಳಿಗಳ ಪ್ರತಿಯನ್ನು ಕೂಡ ಲಗತ್ತಿಸಿದ್ದಾರೆ. ಅದರ ಪ್ರಕಾರ, ಪ್ರಕರಣವೊಂದರಲ್ಲಿ ಅವರ ವಿರುದ್ಧ ವಿಶ್ವವಿದ್ಯಾಲಯವು ಆಂತರಿಕ ತನಿಖೆ ನಡೆಸಿದ್ದು, ಹೊರಿಸಿದ್ದ ಆರೋಪವು ಸಾಬೀತಾಗಿರುತ್ತದೆ. ತನಿಖಾ ವರದಿಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದ್ದು, ವರದಿಯನ್ನು ಅಂಗೀಕರಿಸಿರುವ ಸಿಂಡಿಕೇಟ್ ಅವರಿಗೆ ಯಾವುದೇ ಆಡಳಿತಾತ್ಮಕ ಜವಾಬ್ದಾರಿಗಳನ್ನು ನೀಡಬಾರದು ಎಂದು ನಿರ್ಣಯಿಸಿರುತ್ತದೆ. ಆದಾಗ್ಯೂ ಹಣಕಾಸು ಅಧಿಕಾರಿಯಂತಹ ಮಹತ್ತರವಾದ ಹಾಗೂ ಜವಾಬ್ದಾರಿಯುತವಾದ ಹುದ್ದೆ ನೀಡಿರುವುದು ಸರಿಯಲ್ಲ ಎಂದರು. ಎಲ್ಲಾ ಸದಸ್ಯರು ತಮಗೆ ಸದರಿ ಪತ್ರ ಬಂದಿದ್ದು, ಪರಿಶೀಲಿಸುವಂತೆ ತಿಳಿಸಿದರು. ಡಾ.ಸಂಧ್ಯಾಕಾವೇರಿರವರು ಮಾತನಾಡಿ, ಯಾವುದೇ ನೇಮಕಗಳನ್ನು ಮಾಡುವಾಗ ಹಾಗೂ ಮುಂಬಡ್ತಿಗಳನ್ನು ನೀಡುವ ಸಮಯದಲ್ಲಿ ಸಂಬಂಧಪಟ್ಟವರ ಕುರಿತಾಗಿ ಕೂಲಂಕಶವಾಗಿ ಪರಿಶೀಲಿಸಿ, ನಂತರ ಆಡಳಿತಾತ್ಮಕ ನಿರ್ಣಯ ತೆಗೆದುಕೊಳ್ಳಬೇಕು. ಶ್ರೀ ನಿರಂಜನಮೂರ್ತಿ ರವರು ಮಾತನಾಡುತ್ತಾ ಅವರನ್ನು ಹಣಕಾಸು ಅಧಿಕಾರಿ ಹುದ್ದೆಗೆ ನೇಮಕ ಮಾಡುವ ಪೂರ್ವದಲ್ಲಿಯೇ ಎಲ್ಲಾ ಪೂರ್ವಾಪರಗಳನ್ನು ಕಡತ ಹಾಗೂ ಹಾಗೂ ಸೇವಾ ಪುಸ್ತಕದಲ್ಲಿ ದಾಖಲಿಸಿರುವ ಮಾಹಿತಿಗಳನ್ನು ಪರಿಶೀಲಿಸಿ ನಿರ್ಧಾರ ತೆಗೆದುಕೊಳ್ಳಬೇಕಾಗಿತ್ತು ಎಂದರು.

ಸುಧೀರ್ಘ ಚರ್ಚೆಯ ನಂತರ, ತನಿಖಾ ವರದಿಗಳು, ಹಿಂದಿನ ಸಿಂಡಿಕೇಟ್ ಸಭೆಗಳ ನಿರ್ಣಯ, ವೈಯಕ್ತಿಕ ಕಡತ ಹಾಗೂ ಸೇವಾ ಪುಸ್ತಕವನ್ನು ಪರಿಶೀಲಿಸಿ ದೂರುಗಳು ನಿಜವೆಂದು ಕಂಡುಬಂದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯ, 2000ರ ಪ್ರಕರಣ 20(2)ರನ್ವಯ ಬೇರೊಬ್ಬ ಸೂಕ್ತ ವ್ಯಕ್ತಿಯನ್ನು ಹಣಕಾಸು ಅಧಿಕಾರಿ ಹುದ್ದೆಗೆ ನೇಮಕ ಮಾಡಬೇಕೆಂದು ನಿರ್ಣಯಿಸಲಾಯಿತು.

**2023–ಸಿಂ–4.20(ಸಿ)** ಸದಸ್ಯರಾದ ಸಂಧ್ಯಾಕಾವೇರಿಯವರು ಮಾತನಾಡುತ್ತಾ, ವಿಶ್ವವಿದ್ಯಾಲಯ ಪ್ರಕಟಿಸಿರುವ ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ತರಗತಿಗಳನ್ನು ನಡೆಸುವುದು ಕಷ್ಟವಾಗುತ್ತಿದೆ ಎಂದರು. ಡಾ.ಎಂ.ಸ್ವಾಮಿರವರು ಮಾತನಾಡಿ, ಬಹಳ ದಿನಗಳವರೆಗೆ ನಡೆಯುವ ಸೆಮಿಸ್ಟರ್ ಪರೀಕ್ಷೆಗಳು, ಮೌಲ್ಯಮಾಪನ ಕಾರ್ಯದಲ್ಲಿನ ವಿಳಂಬ ಮುಂತಾದ ಕಾರಣಗಳಿಂದಾಗಿ ಅಧ್ಯಾಪಕರು ಬೋಧನೆಗೆ ಲಭ್ಯವಾಗುವುದಿಲ್ಲ ಎಂದರು. ಕುಲಸಚಿವರು ಮಾತನಾಡಿ, ಕೋವಿಡ್–2019ರ ನಂತರದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯ ಶೈಕ್ಷಣಿಕ ವೇಳಾಪಟ್ಟಿ ಇನ್ನೂ ಸರಿಯಾಗಿಲ್ಲ ಎಂದರು. ಶ್ರೀ ಮಂಜುನಾಥರವರು ಮಾತನಾಡಿ, ಪ್ರಾಥಮಿಕ ಶಿಕ್ಷಣದಿಂದ ಪದವಿ ಪೂರ್ವದವರೆಗೆ ಶೈಕ್ಷಣಿಕ ವೇಳಾಪಟ್ಟಿ ಸರಿದಾರಿಗೆ ಬಂದಿದೆ. ಆದರೆ, ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಶೈಕ್ಷಣಿಕ ವೇಳಾಪಟ್ಟಿ ಮಾತ್ರ ಇನ್ನೂ ಸರಿಯಾಗಿಲ್ಲ ಅಲ್ಲದೇ, ಪದೇ ಪದೇ ಪರಿಷ್ಕರಿಸಲಾಗುತ್ತಿದೆ. ಈಗಾಗಲೇ ಪಿ.ಯು.ಸಿ., ನೀಟ್ ಹಾಗೂ ಸಿ.ಇ.ಟಿ. ಫಲಿತಾಂಶಗಳು ಪ್ರಕಟವಾಗಿದ್ದು, ಇಂಜಿನಿಯರಿಂಗ್ ಮತ್ತು ವೈದ್ಯಕೀಯ, ಡಿಪ್ಲೊಮಾ, ಪ್ಯಾರಾಮೆಡಿಕಲ್ ಇತ್ಯಾದಿ ಕೋರ್ಸ್‌ಗಳ ಪ್ರವೇಶ ಶೀಘ್ರವೇ ಆರಂಭವಾಗಲಿದೆ. ಇದು ಪದವಿ ಕೋರ್ಸ್‌ಗಳ ಪ್ರವೇಶದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಆದುದರಿಂದ, ಪದವಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಶೈಕ್ಷಣಿಕ ವೇಳಾಪಟ್ಟಿಯನ್ನು ಸರಿಪಡಿಸುವುದು ಅಗತ್ಯವಾಗಿದೆ ಎಂದರು. ಇನ್ನು ಮುಂದೆ ಶೈಕ್ಷಣಿಕ ವೇಳಾಪಟ್ಟಿಯನ್ನು ಸಿದ್ಧಪಡಿಸಿ ಅದರ ಸಮರ್ಪಕ ಅನುಷ್ಠಾನಕ್ಕಾಗಿ ಉಸ್ತುವಾರಿ ಸಮಿತಿ ರಚಿಸುವುದು ಉತ್ತಮ ಎಂದರು. ಕಾಲೇಜು ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಮಾತನಾಡಿ, ಕುವೆಂಪು ವಿಶ್ವವಿದ್ಯಾಲಯದಲ್ಲಿ ಪರೀಕ್ಷಾ ಮೌಲ್ಯಮಾಪಕ್ಕಾಗಿ ಹೆಚ್ಚಿನ ದಿನಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಮೌಲ್ಯಮಾಪನ ವಿಳಂಬದಿಂದ ಶೈಕ್ಷಣಿಕ ವೇಳಾಪಟ್ಟಿಯನ್ನು ಆಗಾಗ್ಗೆ ಪರಿಷ್ಕರಿಸಲಾಗುತ್ತಿದೆ. ಆದುದರಿಂದ, ಮೌಲ್ಯಮಾಪನಕ್ಕೆ ಕಿರಿಯ ಅಧ್ಯಾಪಕರು ಸೇರಿದಂತೆ ಹೆಚ್ಚಿನ ಅಧ್ಯಾಪಕರ ಸೇವೆ ಬಳಸಿಕೊಂಡು ನಿಗದಿತ ಅವಧಿಯೊಳಗೇ ಕಡ್ಡಾಯವಾಗಿ ಮುಗಿಸಬೇಕು. ಇದಕ್ಕಾಗಿ 10 ರಿಂದ 15 ದಿನಗಳ ಮಿತಿ ಇಟ್ಟುಕೊಳ್ಳಬೇಕು ಎಂದರು. ಕುಲಸಚಿವರು ಮೌಲ್ಯಮಾಪನರವರು ಮಾತನಾಡಿ, ಕೆಲವು ಅಧ್ಯಾಪಕರು ಮೌಲ್ಯಮಾಪನ ಕಾರ್ಯದಲ್ಲಿ ಪಾಲ್ಗೊಳ್ಳುವುದಿಲ್ಲ. ಇದರಿಂದ ವಿಳಂಬವಾಗುತ್ತಿದೆ ಎಂದರು.

ಸುಧೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ತರಗತಿಗಳು, ಪರೀಕ್ಷೆ, ಮೌಲ್ಯಮಾಪನ ಇತ್ಯಾದಿ ಎಲ್ಲವುದಕ್ಕೂ ಅವಧಿ ನಿಗದಿಪಡಿಸಲು ಶೈಕ್ಷಣಿಕ ವೇಳಾಪಟ್ಟಿಗಳ ಬಗ್ಗೆ ಪೂರ್ಣ ಜ್ಞಾನ ಇರುವಂತಹ ಎಲ್ಲಾ ನಿಕಾಯಗಳಿಂದ ಇಬ್ಬರು ಅಧ್ಯಾಪಕರು, ಸಂಯೋಜಿತ/ಘಟಕ ಕಾಲೇಜುಗಳಿಂದ ಇಬ್ಬರು ಪ್ರಾಂಶುಪಾಲರು ಒಳಗೊಂಡ ಒಂದು ಸ್ಥಾಯೀ ಸಮಿತಿಯನ್ನು ರಚಿಸಿ ಸಮಿತಿಗೆ ಪೂರ್ಣ ಅಧಿಕಾರ ನೀಡುವಂತೆ ಹಾಗೂ ಅಧ್ಯಾಪಕರಿಗೆ ಯು.ಜಿ.ಸಿ., ನಿಯಮಗಳು ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ–1983ರ ಪ್ರಕಾರ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸುವುದು ಕಡ್ಡಾಯವೆಂದು ಪರೀಕ್ಷಾ ವಿಭಾಗದಿಂದ ಸುತ್ತೋಲೆ ಹೊರಡಿಸಬೇಕೆಂದು ಮತ್ತು ಮೌಲ್ಯಮಾಪನ ಕಾರ್ಯಕ್ಕೆ ಗೈರುಹಾಜರಾಗುವ ಅಧ್ಯಾಪಕರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲು ನೇರವಾಗಿ ಕಾಲೇಜು ಶಿಕ್ಷಣ ಇಲಾಖೆಗೆ ವರದಿ ಮಾಡಬೇಕೆಂದು ಒಮ್ಮತದಿಂದ ನಿರ್ಣಯಿಸಲಾಯಿತು.

**2023–ಸಿಂ–4.20(ಡಿ)** ಸದಸ್ಯರಾದ ಶ್ರೀ ಎನ್.ಆರ್. ಮಂಜುನಾಥರವರು ಮಾತನಾಡಿ ಶ್ರೀ ಸಂಪತ್‌ಕುಮಾರ್‌ರವರು ಕಡೂರಿನಲ್ಲಿರುವ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದಲ್ಲಿ ಗ್ರಂಥಾಲಯ ಸಹಾಯಕರಾಗಿ ಸುಮಾರು 15 ವರ್ಷಗಳಿಂದ ಹೊರಗುತ್ತಿಗೆ ಮೂಲಕ ಕರ್ತವ್ಯ ನಿರ್ವಹಿಸುತ್ತಿದ್ದು, ಅವರ ಸೇವೆಯನ್ನು ಪರಿಗಣಿಸಿ ಸಂಚಿತ ವೇತನದ ಆಧಾರದಲ್ಲಿ ಸಹಾಯಕ ಗ್ರಂಥಪಾಲಕರಾಗಿ ನೇಮಕ ಮಾಡುವಂತೆ ಕೋರಿದರು. ಕುಲಸಚಿವರು ಮಾಹಿತಿ ನೀಡುತ್ತಾ, ಅವರು ಕೇವಲ ಸ್ನಾತಕೋತ್ತರ ಪದವಿ ಪಡೆದಿದ್ದು,

ಯು.ಜಿ.ಸಿ. ನಿಯಮಗಳನ್ವಯ ವಿದ್ಯಾರ್ಹತೆ ಹೊಂದಿಲ್ಲವಾದ್ದರಿಂದ ಸಾಧ್ಯವಾಗುವುದಿಲ್ಲ ಎಂದರು. ಶ್ರೀ ಬಿ. ನಿರಂಜನಮೂರ್ತಿರವರು ಮಾತನಾಡಿ, ಅವರು ಬಹಳ ವರ್ಷಗಳಿಂದ ಸ್ನಾತಕೋತ್ತರ ಕೇಂದ್ರದ ಗ್ರಂಥಾಲಯದ ಜವಾಬ್ದಾರಿ ನೋಡಿಕೊಳ್ಳುತ್ತಿದ್ದಾರೆ. ಆದುದರಿಂದ, ಇತ್ತೀಚೆಗೆ ಕೆಲವು ನೌಕರರಿಗೆ ನೀಡಿರುವಂತೆ ಹೆಚ್ಚುವರ ವೇತನವನ್ನಾದರೂ ನೀಡುವುದು ಒಳಿತು ಎಂದರು.

ಸುದೀರ್ಘ ಚರ್ಚೆಯ ನಂತರ, ಕಡೂರಿನಲ್ಲಿರುವ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದಲ್ಲಿ ಬಹಳ ವರ್ಷಗಳಿಂದ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರಂಥಾಲಯ ಸಹಾಯಕರಾದ ಶ್ರೀ ಸಂಪತ್‌ಕುಮಾರ್‌ಇವರಿಗೆ ಪ್ರಸ್ತುತ ಪಡೆಯುತ್ತಿರುವ ವೇತನದ ಜೊತೆಗೆ ಯಾವುದೇ ಕಟಾವಣೆಗಳಿಲ್ಲದೆ ಪ್ರತಿ ಮಾಹೆ ರೂ.5,000/-ಗಳನ್ನು ವಿಶ್ವವಿದ್ಯಾಲಯದ "ಆಸರೆ" ಶೀರ್ಷಿಕೆಯಿಂದ ಭರಿಸಿ, ಜುಲೈ-2023ರ ಮಾಹೆಯಿಂದ ಅನ್ವಯವಾಗುವಂತೆ ಪಾವತಿಸಲು ಸಭೆಯು ನಿರ್ಣಯಿಸಿತು.

ಸಿಂಡಿಕೇಟ್ ಸದಸ್ಯತ್ವದ ಅವಧಿ ದಿನಾಂಕ:19-06-2023ರಂದು ಮುಕ್ತಾಯಗೊಳ್ಳಲಿರುವ ಘನತೆವೆತ್ತ ರಾಜ್ಯಪಾಲರಿಂದ ನಾಮನಿರ್ದೇಶಿತ ಸದಸ್ಯರಾದ ಶ್ರೀ ಬಿ.ನಿರಂಜನಮೂರ್ತಿ ಹಾಗೂ ಶ್ರೀ ಎನ್.ಆರ್. ಮಂಜುನಾಥ ಇವರುಗಳನ್ನು ಹಾಗೂ ಜೂನ್ ಮಾಹೆಯಲ್ಲಿ ವಯೋನಿವೃತ್ತಿ ಹೊಂದುತ್ತಿರುವ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಉಪನಿರ್ದೇಶಕರಾದ ಶ್ರೀ ಓಂಪ್ರಕಾಶ್ ರಾಜೋಳಿ ಇವರನ್ನು ಸನ್ಮಾನಿಸಲಾಯಿತು. ಮಾನ್ಯ ಕುಲಪತಿಯವರು, ಕುಲಸಚಿವರು ಸೇರಿದಂತೆ ಎಲ್ಲಾ ಸದಸ್ಯರು ಮಾತನಾಡಿ ಸಿಂಡಿಕೇಟ್ ಸಭೆಗಳಲ್ಲಿ ನಿರ್ಗಮಿತ ಸದಸ್ಯರ ಅಮೂಲ್ಯ ಸೇವೆಯನ್ನು ಪ್ರಶಂಸಿಸಿದರು. ನಿರ್ಗಮಿತ ಸದಸ್ಯರುಗಳು ಕುವೆಂಪು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಲು ಅವಕಾಶ ನೀಡಿದ್ದಕ್ಕಾಗಿ ಘನತೆವೆತ್ತ ರಾಜ್ಯಪಾಲರು ಹಾಗೂ ಕುವೆಂಪು ವಿಶ್ವವಿದ್ಯಾಲಯಕ್ಕೆ ಕೃತಜ್ಞತೆ ಸಲ್ಲಿಸಿದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/-
ಕುಲಪತಿಗಳು